# ಪವಿತ್ರಕ್ಷೇತ್ರ ಶೃಂಗೇರಿ

WWW.SRINGERI.NET

ಶ್ರೀಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನ
ದಕ್ಷಿಣಾಮ್ನಾಯ ಶ್ರೀಶಾರದಾಪೀಠ, ಶೃಂಗೇರಿ

**Pavitra Kshetra Sringeri (Kannada)**

*Printed at :* *Vidya Bharati Press*
*Shankarapuram, Bangalore 560004*

*(an in–house publication wing of*
*Dakshinamnaya Sri Sharada Peetham,*
*Sringeri 577139)*

*First Edition :* *1992 Copies (5000), Reprint - 1995 (5000)*

*Reprint - 2000 (5000) Reprint - 2011 (5000)*

*Second Edition :* *January 2025 (50000)*
*March 2025 (15000)*

*Contribution Value :* *₹ 20/-*

*© Dakshinamnaya Sri Sharada Peetham, Sringeri*

*Designed by :* *Sri Shankara Advaita Research Centre,*
*Dakshinamnaya Sri Sharada Peetham,*
*Sringeri*

*This book is distributed at a highly subsidised value for the sustenance and propagation of Sanatana Dharma, and to reach all sections of the society. The contribution value received for this book is used for charitable purposes.*

*Copies Available at :* *Dakshinamnaya Sri Sharada Peetham,*
*Sringeri*

*Email :* *adminoffice@sringeri.net*

WWW.SRINGERI.NET

# ಮೊದಲ ಮಾತು

ಅವಿಚ್ಛಿನ್ನವಾದ ಪರಂಪರೆಯಿಂದ ಕೂಡಿದ ನಮ್ಮ ಆರ್ಷೇಯಸನಾತನ ಧರ್ಮದ ಸಂಪ್ರದಾಯವು ಆಚಂದ್ರಾರ್ಕವಾಗಿ ಪ್ರವಹಿಸಲು ಮತ್ತು ವೈದಿಕ ಧರ್ಮದ ಪ್ರಸಾರ ಹಾಗೂ ಅಭಿವೃದ್ಧಿಗಾಗಿ, ವೈದಿಕಧರ್ಮಕ್ಕೆ ಮತ್ತು ವೇದಾಂತಶಾಸ್ತ್ರಕ್ಕೆ ಸಂಬಂಧಿಸಿದ ಸಣ್ಣ ಸಣ್ಣ ಗ್ರಂಥಗಳನ್ನು ಶೃಂಗೇರಿ ಶ್ರೀ ಶಾರದಾ ಪೀಠದ ವತಿಯಿಂದ ಪ್ರಕಟಿಸಿ, ಆಸ್ತಿಕರಿಗೆ ಕಡಿಮೆ ಬೆಲೆಯಲ್ಲಿ ದೊರಕುವಂತೆ ಮಾಡಬೇಕೆಂಬ ಯೋಜನೆಯನ್ನು ಜಗದ್ಗುರು ಶ್ರೀ ಶ್ರೀ ಭಾರತಿ ತೀರ್ಥಮಹಾಸ್ವಾಮಿಗಳವರ ಅನುಗ್ರಹ ಮತ್ತು ಆಶೀರ್ವಾದಗಳೊಂದಿಗೆ ಹಾಕಿಕೊಳ್ಳಲಾಗಿದೆ. ಈ ಯೋಜನೆಯಡಿಯಲ್ಲಿ ಈಗ ಪ್ರಕಟವಾಗುತ್ತಿರುವ ಪವಿತ್ರ ಕ್ಷೇತ್ರ ಶೃಂಗೇರಿ ಎಂಬ ಗ್ರಂಥವು ಎರಡನೆಯದಾಗಿದೆ.

ಈ ಗ್ರಂಥ ರಚನೆಯಲ್ಲಿ ಶ್ರೀಮಠದ ಶಿಷ್ಯರಾದ ಹರಿಹರಪುರ ಶ್ರೀ ಬಿ. ಸುಬ್ರಹ್ಮಣ್ಯಂ ಅವರು ಸಹಕಾರ ನೀಡಿದ್ದಾರೆ.

ಶೃಂಗೇರಿಯ ಹಿನ್ನಲೆಯನ್ನು ಬಹು ಚೆನ್ನಾಗಿ ವಿವರಿಸಿರುವ ಈ ಗ್ರಂಥವನ್ನು ಶೃಂಗೇರಿ ದಕ್ಷಿಣಾಮ್ನಾಯ ಶ್ರೀ ಶಾರದಾಪೀಠದ ಶ್ರೀ ಶ್ರೀ ಜಗದ್ಗುರುಗಳ ಅನುಮತಿಯಿಂದ ಈ ಮಾಲಿಕೆಯಲ್ಲಿ ಪ್ರಕಟಿಸಲಾಗಿದೆ. ಈ ಗ್ರಂಥವನ್ನು ಮುದ್ರಣದಲ್ಲಿ ಸಹಕರಿಸಿದ ಎಲ್ಲರಿಗೂ ಶ್ರೀ ಶಾರದಾ ಚಂದ್ರಮೌಳೀಶ್ವರರು ಸಕಲ ಸೌಭಾಗ್ಯವನ್ನೂ ಕರುಣಿಸಲಿ ಎಂದು ಪ್ರಾರ್ಥಿಸುತ್ತೇನೆ.

ಶೃಂಗೇರಿಗೆ ಬರುವ ಯಾತ್ರಿಕರೆಲ್ಲರಿಗೂ ಕೈಪಿಡಿಯಂತಿರುವ ಈ ಗ್ರಂಥವನ್ನು ಎಲ್ಲರ ಅನುಕೂಲಕ್ಕಾಗಿ ಕಡಿಮೆ ಬೆಲೆಯಲ್ಲಿ ದೊರಕುವಂತೆ ವ್ಯವಸ್ಥೆ ಮಾಡಲಾಗಿದೆ. ಈಗ ಇದರ ಎರಡನೆಯ ಆವೃತ್ತಿಯ ೫೦,೦೦೦ ಪ್ರತಿಗಳೊಂದಿಗೆ ಮುದ್ರಣವಾಗುತ್ತಿರುವುದು ಬಹಳ ಹೆಮ್ಮೆಯ ವಿಷಯ.

ಗುರುಸೇವಾನಿರತ
ಪಿ. ಎ. ಮುರಳಿ
ಆಡಳಿತಾಧಿಕಾರಿ, ಶ್ರೀಮಠ ಶೃಂಗೇರಿ

WWW.SRINGERI.NET

WWW.SRINGERI.NET



ಶೃಂಗೇರಿ ಶ್ರೀಶಾರದಾಂಬಾ



ಜಗದ್ಗುರು ಶ್ರೀಶಂಕರಭಗವತ್ಪಾದಾಚಾರ್ಯರು

WWW.SRINGERI.NET



WWW.SRINGERI.NET

ಜಗದ್ಗುರು ಶ್ರೀನೃಸಿಂಹಭಾರತೀ ಮಹಾಸ್ವಾಮಿಗಳವರು



ಜಗದ್ಗುರು ಶ್ರೀ ಸಚ್ಚಿದಾನಂದ ಶಿವಾಭಿನವ ನೃಸಿಂಹಭಾರತೀ
ಮಹಾಸ್ವಾಮಿಗಳವರು

WWW.SRINGERI.NET



ಜಗದ್ಗುರು ಶ್ರೀ ಚಂದ್ರಶೇಖರಭಾರತೀ ಮಹಾಸ್ವಾಮಿಗಳವರು



ಜಗದ್ಗುರು ಶ್ರೀ ಅಭಿನವವಿದ್ಯಾತೀರ್ಥ ಮಹಾಸ್ವಾಮಿಗಳವರು


WWW.SRINGERI.NET

ಜಗದ್ಗುರು ಶಂಕರಾಚಾರ್ಯ ಶ್ರೀಭಾರತೀತೀರ್ಥಮಹಾಸ್ವಾಮಿಗಳವರು



WWW.SRINGERI.NET

**ಜಗದ್ಗುರು ಶ್ರೀವಿಧುಶೇಖರಭಾರತೀ ಮಹಾಸ್ವಾಮಿಗಳವರು**

# ಶೃಂಗೇರಿಯ ಮಹಿಮೆ

ಕರ್ನಾಟಕದ ಮಲೆನಾಡಿನ ಸರಹದ್ದಿನಲ್ಲಿ, ಸಹ್ಯಾದ್ರಿಯ ಮಡಲಿನಲ್ಲಿ ಪ್ರಕೃತಿಯ ಸೌಂದರ್ಯ ತಾನೇ ತಾನಾಗಿ ಹರಡಿರುವ, ಕಣ್-ಮನಗಳಿಗೆ ಆನಂದವನ್ನು ನೀಡುವ, ಮನಸ್ಸಿಗೆ ದಿವ್ಯವಾದ ಶಾಂತಿಯನ್ನು ನೀಡುವ ಸುಂದರವಾದ ಪರಿಸರದಲ್ಲಿದೆ ಶೃಂಗೇರಿ. ಶೃಂಗೇರಿಯ ಹೆಸರನ್ನು ಕೇಳಿದೊಡನೆ ಮನದಲ್ಲಿ ಅಲೌಕಿಕವಾದ ಆನಂದವುಂಟಾಗುತ್ತದೆ. ಸುತ್ತಲೂ ಹಸಿರಿನಿಂದ ಕಂಗೊಳಿಸುವ ಶೃಂಗೇರಿ ವಿದ್ಯಾಧಿದೇವತೆಯಾದ ಶ್ರೀ ಶಾರದಾ ಮಾತೆಯು ನೆಲಸಿರುವ ಸ್ಥಳ ಮಾತ್ರವಲ್ಲ, ಸಚ್ಚಿದಾನಂದ ಸ್ವರೂಪವಾದ ಪರಬ್ರಹ್ಮದಲ್ಲಿ ಅನುಸಂಧಾನ ಮಾಡಿ ದಿವ್ಯಾನಂದವನ್ನು ಪಡೆಯಬೇಕೆನ್ನುವವರಿಗೆ ಪ್ರಶಾಂತ ಸುಂದರವಾದ ಸ್ಥಳ. ದಿವ್ಯಮಂಗಳಮೂರ್ತಿಯಾದ ಶ್ರೀಶಾರದಾಮಾತೆಯ ಚಿತ್ರ ನಮ್ಮ ಕಣ್ಣುಗಳ ಮುಂದೆ ನಿಲ್ಲುವುದರ ಜೊತೆಗೆ ಆಚಾರ್ಯ ಶಂಕರಭಗವತ್ಪಾದರವರ ಮತ್ತು ಅದ್ವೈತ ದರ್ಶನದ ನೆನಪೂ ಮೂಡಿಬರುವುದು ಸಹಜ. ಶೃಂಗೇರಿ-ಶ್ರೀ ಶಾರದಾಮಾತೆ-ಶ್ರೀಶಂಕರ ಭಗವತ್ಪಾದರು-ಅದ್ವೈತ ದರ್ಶನ ಈ ನಾಲ್ಕರ ಅವಿಭಾಜ್ಯ ಸಂಬಂಧ ಕಳೆದ ೧೨೦೦ ವರ್ಷಗಳಿಗಿಂತಲೂ ಮಿಗಿಲಾಗಿ ಪ್ರವಹಿಸುತ್ತಾ ಬಂದಿದೆಯೆಂಬುದು ವಿಶಿಷ್ಟವಾದುದು.

## ಋಷ್ಯಶೃಂಗ ಮಹರ್ಷಿಗಳು

ಆದಿ ಕಾವ್ಯವಾದ ಶ್ರೀ ಮದ್ವಾಲ್ಮೀಕಿ ರಾಮಾಯಣದ ಬಾಲಕಾಂಡದಲ್ಲಿ (ಸರ್ಗ-೯, ಶ್ಲೋಕ ೪-೨೦) ಶ್ರೀ ಋಷ್ಯಶೃಂಗ ಮಹರ್ಷಿಗಳ ವಿಷಯ ವರ್ಣಿತವಾಗಿದೆ. ಶ್ರೀ ವಿಭಾಂಡಕ ಮಹರ್ಷಿಗಳ ಪುತ್ರರಾದ ಶ್ರೀ ಋಷ್ಯಶೃಂಗರ ಹುಟ್ಟಿನ ಹಿನ್ನೆಲೆ ವೈಶಿಷ್ಟ್ಯಗಳಿಂದ ಕೂಡಿದೆ. ಹುಟ್ಟಿದ ಮಗುವಿನ ತಲೆಯ ಮೇಲೆ ಮೃಗ ಲಾಂಛನವಾದ ಶೃಂಗ (ಕೋಡು) ಇದ್ದುದರಿಂದ ಋಷ್ಯಶೃಂಗ ಎಂದು ಹಸರು ಬಂದಿತು. ತಂದೆಯಾದ ವಿಭಾಂಡಕರ ಆರೈಕೆಯಲ್ಲಿ ಬೆಳೆದು ತಾರುಣ್ಯಕ್ಕೆ ಕಾಲಿಟ್ಟ ಋಷ್ಯಶೃಂಗರಿಗೆ ಲೌಕಿಕದ ಪರಿಚಯವಿರಲಿಲ್ಲ. ತಂದೆಯವರ ಮಾರ್ಗದರ್ಶನದಲ್ಲಿ ಸಮಸ್ತ ವಿದ್ಯೆಗಳಲ್ಲೂ ಪರಿಣತಿಯನ್ನು ಹೊಂದಿದ ಋಷ್ಯಶೃಂಗರು ಧ್ಯಾನ ಮತ್ತು ತಪಸ್ಸುಗಳಲ್ಲಿ ಮಗ್ನರಾಗಿದ್ದ ಮಹಿಮಾ ಸಂಪನ್ನರು.

ಅಂಗ ದೇಶದಲ್ಲಿ ಒಮ್ಮೆ ಭೀಕರ ಕ್ಷಾಮ ತಲೆದೋರಿದಾಗ, ಆ ದೇಶದ ದೊರೆ ರೋಮಪಾದನು ಹಿರಿಯ ಋಷಿ, ಮುನಿಗಳೊಡನೆ ಸಮಾಲೋಚನೆ ಮಾಡಿ ಅವರ ಸಲಹೆಯಂತೆ ಬಹುಪ್ರಯತ್ನಪಟ್ಟು ಋಷ್ಯಶೃಂಗರನ್ನು ತನ್ನ ರಾಜ್ಯಕ್ಕೆ ಬರಮಾಡಿಕೊಳ್ಳುತ್ತಾನೆ. ಋಷ್ಯಶೃಂಗರ ಆಗಮನ ಮಾತ್ರದಿಂದಲೇ ರಾಜ್ಯದಲ್ಲಿ ಸುವೃಷ್ಟಿಯಾಗಿ ಸುಭಿಕ್ಷವಾಗುತ್ತದೆ. ಅನಂತರ ದಶರಥ ಚಕ್ರವರ್ತಿಯ ಆಹ್ವಾನ ಮತ್ತು ಅಪೇಕ್ಷೆಯಂತೆ ಅಯೋಧ್ಯೆಗೆ ತೆರಳಿದ ಋಷ್ಯಶೃಂಗರು ಮಹರ್ಷಿಗಳಾದ ವಸಿಷ್ಠ, ವಾಮದೇವ, ಮುಂತಾದವರ ಸಮ್ಮುಖದಲ್ಲಿ ದಶರಥನಿಗೆ ಸಂತಾನ ಪ್ರಾಪ್ತಿಗಾಗಿ ಪುತ್ರಕಾಮೇಷ್ಟಿಯಾಗವನ್ನು ಮಾಡಿಸಿದರು. ಋಷ್ಯಶೃಂಗರಿಗೆ ರೋಮಪಾದನ ಮಗಳು ಶಾಂತಾದೇವಿಯೊಡನೆ ವಿವಾಹವೂ ನಡೆಯಿತು. ಕೆಲವುಕಾಲದ ನಂತರ ಅಯೋಧ್ಯೆಯಿಂದ ಸ್ವಸ್ಥಾನಕ್ಕೆ ಹಿಂದಿರುಗಿದ ಋಷ್ಯಶೃಂಗರು ಶೃಂಗೇರಿಗೆ ಆರುಮೈಲಿಗಳ

WWW.SRINGERI.NET

ದೂರದಲ್ಲಿರುವ ಕಿಗ್ಗ (ಕೀಳ್ಗ) ಎಂಬ ಸ್ಥಳದಲ್ಲಿ ಆಶ್ರಮವನ್ನು ಸ್ಥಾಪಿಸಿಕೊಂಡು ತಪಸ್ಸಿನಲ್ಲಿ ನಿರತರಾದರು.

ಮಹರ್ಷಿ ವಿಭಾಂಡಕರ ಆಶ್ರಮವೇ ಈಗಿನ ಶೃಂಗೇರಿ. ಊರಿನ ಮಧ್ಯದಲ್ಲಿರುವ ಚಿಕ್ಕ ಬೆಟ್ಟದ ಮೇಲಿರುವ ಶ್ರೀ ಮಲಹಾನಿಕರೇಶ್ವರ (ಮಲ್ಲಿಕಾರ್ಜುನ) ಸನ್ನಿಧಿಯಲ್ಲಿ ತಪೋನಿರತರಾಗಿದ್ದ ವಿಭಾಂಡಕರು ಕೊನೆಗೆ ಈ ಶಿವಲಿಂಗದಲ್ಲಿಯೇ ಐಕ್ಯ ಹೊಂದಿದರು. ಕಿಗ್ಗದಲ್ಲಿ ತಪಸ್ಸು ಮಾಡುತ್ತಿದ್ದ ಋಷ್ಯಶೃಂಗರೂ ಸಹ ಅಂತ್ಯದಲ್ಲಿ ಶಿವಲಿಂಗ ರೂಪವನ್ನು ತಳೆದರು. ಈ ಎಲ್ಲ ವಿವರಗಳೂ ಶ್ರೀಮದ್ರಾಮಾಯಣ ಮತ್ತು ಸ್ಕಾಂದ ಪುರಾಣದ ಸಹ್ಯಾದ್ರಿ ಖಂಡದಲ್ಲಿದೆ. ಈ ಋಷ್ಯಶೃಂಗ ಮುನಿಗಳಿಂದಲೇ ಈ ಪ್ರದೇಶಕ್ಕೆ ಶೃಂಗಗಿರಿ ಎಂದು ಹೆಸರು ಬಂದು, ಕ್ರಮೇಣ ಆಡುಮಾತಿನಲ್ಲಿ ಶೃಂಗೇರಿ ಎಂದು ರೂಢಿಗೆ ಬಂದಿದೆ. ಸುತ್ತಮುತ್ತಲೂ ಆಗಸಕ್ಕೆ ತಲೆಚಾಚಿ ನಿಂತಿರುವ ಗುಡ್ಡ - ಬೆಟ್ಟಗಳೂ ಶೃಂಗೇರಿ ಎಂಬ ಹೆಸರನ್ನು ಸಾರ್ಥಕಗೊಳಿಸಿವೆ.

ಕಿಗ್ಗದಲ್ಲಿರುವ ಪುರಾತನ ಶ್ರೀ ಋಷ್ಯಶೃಂಗೇಶ್ವರನ ದೇವಾಲಯದಲ್ಲಿ ರುದ್ರಾಕ್ಷಿಯ ಚಿಹ್ನೆ - ತಲೆಯ ಮೇಲೆ ಶೃಂಗಗಳಿರುವ ಭವ್ಯವಾದ ಹಾಗೂ ಅಪರೂಪವಾದ ಶಿವಲಿಂಗವಿದೆ. ಈ ಋಷ್ಯಶೃಂಗೇಶ್ವರನ ಸಾನ್ನಿಧ್ಯದಿಂದ ಈ ಪ್ರಾಂತ್ಯವು ಸುವೃಷ್ಟಿ ಸುಭಿಕ್ಷಗಳಿಂದ ಕೂಡಿದೆ. ಒಂದುವೇಳೆ ಅತಿವೃಷ್ಟಿ ಅಥವಾ ಅನಾವೃಷ್ಟಿ ಪ್ರಸಂಗಬಂದಾಗ ಈ ಪ್ರಾಂತ್ಯದ ಜನರು ಈ ಋಷ್ಯಶೃಂಗೇಶ್ವರನ ಮತ್ತು ಮಲಹಾನಿಕರೇಶ್ವರ ದೇವರುಗಳಿಗೆ ಪ್ರಾರ್ಥನೆ-ಪೂಜಾದಿಗಳನ್ನು ಸಲ್ಲಿಸಿ ಅನುಕೂಲ ಪಡೆಯುತ್ತಾರೆ. ಈ ವಿಷಯವನ್ನು ಗಮನಿಸಿದಾಗ ಇವೆಲ್ಲವೂ ಮೇಲೆ ಕಾಣಿಸಿದ ಶ್ರೀಮದ್ರಾಮಾಯಣ ಮತ್ತು ಸ್ಕಾಂದಪುರಾಣಗಳ ಉಲ್ಲೇಖಗಳಿಗೆ ಪುಷ್ಟಿ ನೀಡಿ, ಸ್ಥಳದ ಪಾವಿತ್ರ್ಯ ಮತ್ತು ಪ್ರಾಚೀನತೆಯನ್ನು ಸ್ಪಷ್ಟಪಡಿಸುತ್ತದೆ. (ಈ ಸಂದರ್ಭದಲ್ಲಿ ಒಂದು ವಿಷಯವನ್ನು

WWW.SRINGERI.NET



WWW.SANSKRIT.NET

ರತ್ನಗರ್ಭ ಗಣಪತಿ



**ತೋರಣ ಗಣಪತಿ**



**ಶಕ್ತಿ ಗಣಪತಿ**

ಸೂಚಿಸಬಹುದು. ಶ್ರೀ ಋಷ್ಯಶೃಂಗ ಮಹರ್ಷಿಗಳು ಅಂಗದೇಶ ಮತ್ತು ಅಯೋಧ್ಯೆಗೆ ಹೋಗಿದ್ದರೆಂಬುದನ್ನು ತಿಳಿಸಲಾಗಿದೆಯಷ್ಟೇ. ಇದಕ್ಕೆ ಪೂರಕವಾಗಿ ಉತ್ತರ ಪ್ರದೇಶದ ಫೈಜಾಬಾದ್ ಜಿಲ್ಲೆಯಲ್ಲಿರುವ ಶೃಂಗಿ ಋಷಿಯ ಆಶ್ರಮ, ರಾಮಾಯಣದ ಗುಹನ ವಾಸಸ್ಥಾನವಾದ ಶೃಂಗಭೇರಪುರದಲ್ಲಿರುವ ಚಿಕ್ಕ ಶೃಂಗೇಶ್ವರ ದೇವಾಲಯ ಮತ್ತು ಬಿಹಾರ ರಾಜ್ಯದ ಮುಂಘೈರ್ ಜಿಲ್ಲೆಯಲ್ಲಿ ಶ್ರೀ ಋಷ್ಯಶೃಂಗರು ಕೆಲವು ಕಾಲ ತಪಸ್ಸನ್ನು ಮಾಡಿದ ಶೃಂಗಾರಿಕಾ ಆಶ್ರಮ, ಇವುಗಳನ್ನು ಉಲ್ಲೇಖಿಸಬಹುದು)

ಹೀಗೆ, ಶೃಂಗೇರಿ ಮತ್ತು ಪರಿಸರದ ಪ್ರದೇಶವು ಶ್ರೀ ರಾಮಾಯಣದ ಕಾಲದಿಂದಲೂ ಋಷಿ-ಮುನಿಗಳ ತಪೋಭೂಮಿಯಾಗಿ ಪವಿತ್ರವಾದ ಸ್ಥಳವಾಗಿತ್ತೆಂದು ಪ್ರಸಿದ್ಧವಾಗಿದೆ.

WWW.SRINGERI.NET

# ಜಗದ್ಗುರು ಶ್ರೀ ಶಂಕರ ಭಗವತ್ಪಾದಾಚಾರ್ಯರು

೧೨೦೦ ವರ್ಷಗಳ ಹಿಂದೆ ಶುದ್ಧ-ಸಾತ್ವಿಕ ಧರ್ಮದ ಸ್ವರೂಪವು ಬದಲಾಗುತ್ತಾ ಬಂದಿತು. ಸಾಂಪ್ರದಾಯಿಕವಾಗಿ ಪರಂಪರೆಯಾಗಿ ಬಂದ ಧರ್ಮವನ್ನು ಆಚರಿಸುತ್ತ ಬಂದವರಿಗೆ ಅನೇಕ ಅಡ್ಡಿ-ಆತಂಕಗಳು ಬಂದೊದಗಿದವು. ಇಹ-ಪರಗಳ ಸುಖಸಾಧನೆಯೇ ಧರ್ಮದ ಪರಮಗುರಿ. ಆದರೆ, ಆ ಸುಖಗಳನ್ನು ಸುಲಭವಾಗಿ ಸಂಪಾದಿಸಲು ವಾಮಮಾರ್ಗದ ತಾಂತ್ರಿಕ ಅನುಷ್ಠಾನ-ನರಬಲಿ-ಭೋಗರೂಪಾದ ಆಚರಣೆಗಳೇ ಮುಖ್ಯ ಸಾಧನೆಗಳೆಂಬ ತಪ್ಪು ಕಲ್ಪನೆಗಳು ವ್ಯಾಪಿಸತೊಡಗಿದವು. ಹಿಂಸೆ-ಕ್ರೌರ್ಯ-ಸಜ್ಜನರ ಪೀಡೆ ಇವು ವಿಜೃಂಭಿಸತೊಡಗಿದವು. ಇವನ್ನು ತಡೆಗಟ್ಟಿ ಸಾತ್ವಿಕ ಪ್ರವೃತ್ತಿ ಬೆಳೆಯುವಂತೆ ಮಾಡುವ ಉದ್ದೇಶದಿಂದ ಹಾಗೂ ಸನಾತನ ಧರ್ಮದ ಪುನರುತ್ಥಾನಕ್ಕಾಗಿ ಆಚಾರ್ಯ ಶ್ರೀ ಶಂಕರ ಭಗವತ್ಪಾದರು ಅವತರಿಸಿದರು (ಕ್ರಿ.ಶ. ೭೮೮).

# ದಕ್ಷಿಣಾಮ್ನಾಯ ಶ್ರೀಶಾರದಾ ಪೀಠದ ಅವಿಚ್ಛಿನ್ನ ಗುರುಪರಂಪರೆ

ದಕ್ಷಿಣ ಭಾರತದ ಕೇರಳದಲ್ಲಿನ ಕಾಲಟೀ ಅಗ್ರಹಾರದಲ್ಲಿ ಜನಿಸಿದ ಶ್ರೀ ಶಂಕರರು ತಮ್ಮ ೫ನೇ ವಯಸ್ಸಿನಲ್ಲಿ ಉಪನೀತರಾಗಿ, ೮ನೇ ವಯಸ್ಸಿಗೇ ವೇದಸಾಹಿತ್ಯಗಳ ಅಧ್ಯಯನವನ್ನು ಮುಗಿಸಿ, ಸಂನ್ಯಾಸ ಸ್ವೀಕರಿಸಿ, ೧೨ನೇ ವಯಸ್ಸಿಗೆ ಸಕಲ ಶಾಸ್ತ್ರಗಳಲ್ಲಿ ಪರಿಣತಿ ಪಡೆದರು. ೧೬ನೇ ವಯಸ್ಸಿಗೇ

WWW.SRINGERI.NET

ಪ್ರಸ್ಥಾನತ್ರಯ ಭಾಷ್ಯಗಳನ್ನು ರಚಿಸಿ, ಆರ್ಷೇಯವಾದ ಅದ್ವೈತ ಸಿದ್ಧಾಂತವನ್ನು ಯಾವ ಸಂದೇಹಕ್ಕೂ ಅವಕಾಶವಿಲ್ಲದ ರೀತಿಯಲ್ಲಿ ಪ್ರತಿಪಾದನೆ ಮಾಡಿದರು. ಭರತ ಖಂಡವನ್ನೆಲ್ಲ ಮೂರು ಬಾರಿ ಸುತ್ತಿ, ಬೇರೆ ಬೇರೆ ಸಿದ್ಧಾಂತಗಳನ್ನು ಪ್ರತಿಪಾದಿಸುವರನ್ನು ಮುಖತಃ ಕಂಡು ಚರ್ಚೆ ಮಾಡಿ, ಅವರವರ ಸಿದ್ಧಾಂತಗಳಲ್ಲಿದ್ದ ದೋಷಗಳನ್ನು ಅವರಿಗೆ ಮನಗಾಣಿಸಿ, ಅವರನ್ನು ಅದ್ವೈತ ಸಿದ್ಧಾಂತಾನುಯಾಯಿಗಳನ್ನಾಗಿ ಮಾಡಿದರು. ಹೀಗೆ ಆರ್ಷೇಯವಾದ ವೈದಿಕ ಧರ್ಮವನ್ನು ಪುನರ್ನೆಲೆಗೊಳಿಸಿದ ಶ್ರೀ ಶಂಕರರು ಈ ಧರ್ಮ - ತನ್ಮೂಲಕ ಭಾರತದ ಸಮಗ್ರತೆಯನ್ನು ನಿರಾಂತಕವಾಗಿ ಮುನ್ನಡೆಯಿಸಬೇಕೆಂದು ನಿರ್ಧರಿಸಿ ನಾಲ್ಕು ದಿಕ್ಕುಗಳಲ್ಲಿ ನಾಲ್ಕು ವೇದಗಳ ಪ್ರತೀಕಗಳಾದ ನಾಲ್ಕು ಆಮ್ನಾಯ ಪೀಠಗಳನ್ನು ಪ್ರತಿಷ್ಠಾಪನೆ ಮಾಡಿ, ತಮ್ಮ ನಾಲ್ವರು ಪ್ರಮುಖ ಶಿಷ್ಯರನ್ನು ಈ ಪೀಠಗಳ ಧರ್ಮಾಚಾರ್ಯರನ್ನಾಗಿ ನಿಯಮಿಸಿದರು. ಇವುಗಳಲ್ಲಿ ಆಚಾರ್ಯ ಶ್ರೀ ಶಂಕರರು ಮೊಟ್ಟ ಮೊದಲು ಸ್ಥಾಪಿಸಿದುದೇ ಶೃಂಗೇರಿಯ ದಕ್ಷಿಣಾಮ್ನಾಯ ಶ್ರೀ ಶಾರದಾಪೀಠ. ಕಾಶ್ಮೀರಪುರವಾಸಿನಿಯೂ, ವಿದ್ಯಾಧಿದೇವತೆಯೂ ಆದ ಶ್ರೀ ಶಾರದೆಯನ್ನು ಈ ಪೀಠದಲ್ಲಿ ಪ್ರತಿಷ್ಠಾಪನೆ ಮಾಡಿದರು. ಅವರ ಶಿಷ್ಯರಾದ ಶ್ರೀ ಸುರೇಶ್ವರಾಚಾರ್ಯರು ಈ ಶಾರದಾಪೀಠದ ಪ್ರಥಮ ಆಚಾರ್ಯರು. ಅಂದಿನಿಂದ ಇಂದಿನವರೆಗೂ ಅವಿಚ್ಛಿನ್ನವಾದ ಪರಂಪರೆಯನ್ನು ಹೊಂದಿರುವ ಈ ಶಾರದಾ ಪೀಠದಲ್ಲಿ ತಪೋನಿಷ್ಠರೂ, ಯೋಗನಿಷ್ಠರೂ, ಮಹಾಮಹಿಮರೂ ಆದ ಜಗದ್ಗುರುಗಳು ವಿರಾಜಿಸಿದ್ದಾರೆ. ಪ್ರಕೃತದಲ್ಲಿ ಶ್ರೀ ಶ್ರೀ ಶ್ರೀಮದಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳವರ ಕರಕಮಲಸಂಜಾತರಾದ ಜಗದ್ಗುರು ಶ್ರೀ ಶ್ರೀ ಭಾರತೀ ತೀರ್ಥಮಹಾಸ್ವಾಮಿಗಳವರು ೩೬ನೇ ಪೀಠಾಧಿಪತಿಗಳಾಗಿ ವಿರಾಜಮಾನರಾಗಿದ್ದಾರೆ.

WWW.SRINGERI.NET



ಶ್ರೀ ಶಾರದಾಂಬಾ ದೇವಾಲಯ



ಜಗದ್ಗುರು ಶ್ರೀಶ್ರೀ ಸಚ್ಚಿದಾನಂದ ಶಿವಾಭಿನವ ನೃಸಿಂಹಭಾರತೀ ಮಹಾಸ್ವಾಮಿಗಳವರ, ಜಗದ್ಗುರು ಶ್ರೀ ಚಂದ್ರಶೇಖರ ಭಾರತೀ ಮಹಾಸ್ವಾಮಿಗಳವರ ಮತ್ತು ಜಗದ್ಗುರು ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳವರ ಅಧಿಷ್ಠಾನಗಳು

WWW.SRINGERI.NET

ಆಚಾರ್ಯ ಶ್ರೀ ಶಂಕರರಿಂದ ನಿಯುಕ್ತರಾದ ಶ್ರೀ ಸುರೇಶ್ವರಾಚಾರ್ಯರಿಂದ ಆರಂಭಿಸಿ ಮುಂದೆ ಸುಮಾರು ೫೦೦ ವರ್ಷಗಳವರೆಗೆ ಅಂದರೆ ೧೧ನೇ ಆಚಾರ್ಯರಾದ ಶ್ರೀ ಭಾರತೀ ತೀರ್ಥರವರೆಗೆ ಶೃಂಗೇರಿಯು ಒಂದು ಆಶ್ರಮದಂತೆ ಇದ್ದು, ಆಚಾರ್ಯ ಶ್ರೀ ಶಂಕರರು ಸ್ಥಾಪಿಸಿದ ಶ್ರೀಶಾರದಾಂಬೆ ಮತ್ತು ಅವರು ಅನುಗ್ರಹಿಸಿದ ಶ್ರೀ ಚಂದ್ರಮೌಳೀಶ್ವರ ಮತ್ತು ರತ್ನಗರ್ಭ ಗಣಪತಿಯ ಉಪಾಸನೆಯ ಜೊತೆಗೆ, ಆಧ್ಯಾತ್ಮಿಕ ಗ್ರಂಥಗಳ ರಚನೆ, ಜ್ಞಾನಾರ್ಥಿಗಳಾಗಿ ಬಂದವರಿಗೆ ಉಪದೇಶ, ಅದ್ವೈತವೇದಾಂತವನ್ನು ಕುರಿತ ಪ್ರವಚನಗಳನ್ನು ಆಚಾರ್ಯರುಗಳು ನಡೆಸಿಕೊಂಡು ಬರುತ್ತಿದ್ದರು. ಭಾರತದ ವಿವಿಧ ಭಾಗಗಳಿಂದ ಬಂದ ಜ್ಞಾನಾರ್ಥಿಗಳು ಇಲ್ಲಿಯ ಆಚಾರ್ಯರ ನಿರ್ದೇಶನದಲ್ಲಿ ಅಧ್ಯಾತ್ಮ ವಿದ್ಯೆಯಲ್ಲಿ ಪರಿಣತರಾಗುತ್ತಿದ್ದರು.

ಆ ವೇಳೆಗಾಗಲೇ (ಅಂದರೆ ಕ್ರಿ.ಶ.೧೩ನೇ ಶತಮಾನ) ಉತ್ತರ ಭಾರತವನ್ನು ಆಕ್ರಮಿಸಿ ಆಡಳಿತ ನಡೆಸುತ್ತಿದ್ದ ವಿಧರ್ಮೀಯರು ದಕ್ಷಿಣದ ಕಡೆಗೂ ದಂಡಯಾತ್ರೆ ಹೊರಟರು. ದೇಶದ ಸಂಪತ್ತನ್ನು ಕೊಳ್ಳೆ ಹೊಡೆಯುವುದು, ವೈದಿಕ ಸನಾತನ ಧರ್ಮವನ್ನು ನಾಶಗೊಳಿಸಿ, ತಮ್ಮ ಧರ್ಮವನ್ನು ನೆಲೆಗೊಳಿಸುವುದು, ಎಲ್ಲ ಕಡೆ ತಮ್ಮ ಪ್ರಭುತ್ವವನ್ನು ಸ್ಥಾಪಿಸುವುದು, ಅವರ ಮುಖ್ಯ ಉದ್ದೇಶವಾಗಿದ್ದಿತು. ಕಲಾಪೂರ್ಣ ಪವಿತ್ರ ದೇವಾಲಯಗಳನ್ನು ಧ್ವಂಸಮಾಡುವುದು, ಲೂಟಿ, ಅಮಾಯಕ ಜನರ ಕಗ್ಗೊಲೆ, ಸೈನಿಕರ ಪ್ರಳಯತಾಂಡವಗಳು ದಕ್ಷಿಣ ಭಾರತದಲ್ಲಿಯೂ ವ್ಯಾಪಿಸತೊಡಗಿತು.

ಈ ಸಮಯದಲ್ಲಿ ಶೃಂಗೇರಿಯ ಧರ್ಮಪೀಠದಲ್ಲಿ ಹತ್ತನೆಯ ಆಚಾರ್ಯರಾಗಿದ್ದ ಶ್ರೀ ವಿದ್ಯಾತೀರ್ಥರು ಅಪ್ರತಿಮ ಯೋಗಸಾಧಕರು. ಹಸಿವು, ನಿದ್ರೆ, ನೀರಡಿಕೆಗಳನ್ನು ಜಯಿಸಿದ್ದ ಮಹಾಮಹಿಮೆ ಸಂಪನ್ನರು. ಅವರಿಂದ ಮೊದಲು ಸಂನ್ಯಾಸ ದೀಕ್ಷೆ ಪಡೆದವರು

WWW.SRINGERI.NET

ಶ್ರೀ ಭಾರತೀತೀರ್ಥರು. ಇವರ ಪೂರ್ವಾಶ್ರಮದ ಹಿರಿಯ ಸಹೋದರ ಶ್ರೀ ಮಾಧವಾಚಾರ್ಯರು. ಅನಂತರ ಶ್ರೀ ವಿದ್ಯಾತೀರ್ಥರಿಂದ ಸಂನ್ಯಾಸ ದೀಕ್ಷೆ ಪಡೆದು ಶ್ರೀ ವಿದ್ಯಾರಣ್ಯರಾದರು. ಶ್ರೀ ವಿದ್ಯಾರಣ್ಯರು ಅನಂತರ ಹಂಪೆಯ ಶ್ರೀ ವಿರೂಪಾಕ್ಷ ಕ್ಷೇತ್ರದಲ್ಲಿ ತಪೋನಿಷ್ಠರಾದರು. ದಕ್ಷಿಣ ಭಾರತದಲ್ಲಿ ರಾಜಕೀಯ ಹಾಗೂ ಧಾರ್ಮಿಕ ಮಹಾವಿಪ್ಲವ ನಡೆಯುತ್ತಿದ್ದ ಆ ಕಾಲದಲ್ಲಿ ಆಚಾರ್ಯ ಶಂಕರರ ಈ ದಕ್ಷಿಣಾಮ್ನಾಯ ಪೀಠದಲ್ಲಿ ಜ್ಞಾನ ಮತ್ತು ತಪಸ್ಸುಗಳಿಂದ ಸಂಪನ್ನರಾದ ಈ ಮೂವರು ತೇಜೋಮೂರ್ತಿಗಳು ದೇಶ ಮತ್ತು ಧರ್ಮವನ್ನು ಈ ದುರ್ದೆಶೆಯಿಂದ ಪಾರುಮಾಡಲೇಬೇಕೆಂಬ ದೃಢನಿರ್ಧಾರಕ್ಕೆ ಬಂದಿದ್ದು ನಾಡಿನ ಭಾಗ್ಯ ವಿಶೇಷ.

ಶ್ರೀ ವಿದ್ಯಾತೀರ್ಥರ ಮತ್ತು ಶ್ರೀ ಭಾರತೀತೀರ್ಥರ ಸಲಹೆಯಂತೆ ಕಾರ್ಯ ಪ್ರವೃತ್ತರಾದ ಶ್ರೀ ವಿದ್ಯಾರಣ್ಯರು ಹಕ್ಕ-ಬುಕ್ಕರೆಂಬ ತರುಣಯೋಧರಿಗೆ ತಮ್ಮ ತಪಃಶಕ್ತಿ ಹಾಗೂ ಜ್ಞಾನದ ಬೆಂಬಲ ನೀಡಿ ಹಂಪೆಯಲ್ಲಿ ವಿಜಯನಗರದ ಸಾಮ್ರಾಜ್ಯ ಸ್ಥಾಪನೆಯಾಗಲು ಕಾರಣರಾದರು. ಕ್ರಿ.ಶ. ೧೩೩೬ರಲ್ಲಿ ಉದಯಿಸಿದ ಈ ಸಾಮ್ರಾಜ್ಯವು ವಿಧರ್ಮೀಯರ ಪ್ರಾಬಲ್ಯವನ್ನು ತೊಡೆದು ಹಾಕಿತು. ದಕ್ಷಿಣದ ಬಹುಭಾಗಗಳಲ್ಲಿ ತನ್ನ ಪ್ರಭಾವವನ್ನು ಬೀರಿದ್ದ ಈ ಸಾಮ್ರಾಜ್ಯವು ಭಗ್ನ ದೇವಾಲಯಗಳ ಪುನರ್ನಿರ್ಮಾಣ, ಸಂಗೀತ-ಸಾಹಿತ್ಯ-ನಾಟಕಾದಿಗಳ ಬೆಳವಣಿಗೆ, ವೈದಿಕ ಧರ್ಮದ ಪುನರುದ್ಧಾರ, ಪ್ರಜೆಗಳ ಸುಖ-ಸಮೃದ್ಧಿಗಳಿಗಾಗಿ ಯೋಜನಾಬದ್ಧ ದಕ್ಷ ಆಡಳಿತವನ್ನು ೩೦೦ ವರ್ಷಗಳ ಕಾಲ ನಡೆಸಿ, ವಿಶ್ವದ ಇತಿಹಾಸದಲ್ಲೇ ತನ್ನ ಹೆಸರನ್ನು ಚಿರಸ್ಥಾಯಿಯನ್ನಾಗಿಸಿದೆ. ಅಂದು ಶೃಂಗೇರಿ ಪೀಠದ ಯೋಗಿವರ್ಯರ ದೃಢಸಂಕಲ್ಪ ಹಾಗೂ ಶ್ರೀ ವಿದ್ಯಾರಣ್ಯರ ಪರಿಶ್ರಮದ ಫಲವಾಗಿ ವಿಜಯನಗರ ಸ್ಥಾಪನೆಯಾದುದರಿಂದಲೇ ಇಂದು ನಾವು ಸನಾತನಧರ್ಮದ ಅನುಯಾಯಿಗಳಾಗಿ ಮುಂದುವರೆಯಲು ಸಾಧ್ಯವಾಗಿದೆ.

WWW.SRINGERI.NET

ವಿಜಯನಗರದ ಮೊದಲ ಚಕ್ರವರ್ತಿ ಹರಿಹರರಾಯರು ಕ್ರಿ.ಶ. ೧೩೪೬ರಲ್ಲಿ ಶೃಂಗೇರಿಗೆ ಬಂದು, ಆಗ ಹಿರಿಯ ಪೀಠಾಧಿಪತಿಗಳಾಗಿದ್ದ ಶ್ರೀ ಭಾರತೀಕೃಷ್ಣ ತೀರ್ಥರನ್ನು ಸಂದರ್ಶಿಸಿ ಆಶೀರ್ವಾದ ಪಡೆದರು. ಶ್ರೀ ಪೀಠದಲ್ಲಿ ನಡೆಯುತ್ತಿದ್ದ ದೇವರ ಪೂಜೆ, ಉತ್ಸವ, ವಿದ್ಯಾಪ್ರಸಾರ, ಅನ್ನದಾನ, ಇವುಗಳು ನಿರಾಂತಕವಾಗಿ ನಡೆಯುವಂತೆ ಭೂಮಿಯನ್ನು ದತ್ತಿಯಾಗಿ ನೀಡಿದರು. ಪೀಠಾಧಿಪತಿಗಳಿಗೆ ಚಿನ್ನದ ಕಿರೀಟವೇ ಮೊದಲಾದ ರಾಜ ಲಾಂಛನಗಳನ್ನೂ, ಕಾಣಿಕೆಗಳನ್ನೂ ಸಮರ್ಪಿಸಿದರು. ಮುಂದೆ, ಅವರ ಸಹೋದರ ಬುಕ್ಕ ಭೂಪತಿಗಳೂ, ಎರಡನೆಯ ಹರಿಹರರಾಯರೂ ಶೃಂಗೇರಿಯ ಪೀಠಕ್ಕೆ ಅನೇಕ ಸರ್ವಮಾನ್ಯಗಳನ್ನೂ ಸಮರ್ಪಿಸಿದ್ದಾರೆ. ಕರ್ನಾಟಕ ಸಿಂಹಾಸನ ಪ್ರತಿಷ್ಠಾಪನಾಚಾರ್ಯ ಎಂಬ ಬಿರುದು ಶೃಂಗೇರಿಯ ಜಗದ್ಗುರುಗಳಿಗೆ ವಿಜಯನಗರ ಕಾಲದಿಂದ ನಡೆದುಬಂದಿದೆ.

ಅದುವರೆಗೆ ಆಶ್ರಮ-ಧರ್ಮಪೀಠವಾಗಿದ್ದ ಶೃಂಗೇರಿಯು ಧರ್ಮ ಸಂಸ್ಥಾನವಾಗಿ ಪರಿವರ್ತಿತವಾಯಿತು. ಧರ್ಮಪ್ರಚಾರದ ಜೊತೆಗೆ ತನ್ನ ಆಸ್ತಿ-ಪಾಸ್ತಿಗಳ ಮೇಲ್ವಿಚಾರಣೆಗೆ, ಅಭಿವೃದ್ಧಿಗಳಿಗೆ ಅಗತ್ಯವಾದ ಆಡಳಿತ ವ್ಯವಸ್ಥೆಯನ್ನು ರೂಪಿಸಿಕೊಂಡು ಮುನ್ನಡೆಯತೊಡಗಿತು.

ಶ್ರೀ ವಿದ್ಯಾರಣ್ಯರು ಶ್ರೀ ಶೃಂಗೇರಿ ಧರ್ಮ ಸಂಸ್ಥಾನದ ಪೀಠಾಧಿಪತಿಗಳಾಗಿ ನಿರ್ವಹಿಸಿದ ಇನ್ನೊಂದು ಮಹತ್ವಪೂರ್ಣ ಕೆಲಸವೆಂದರೆ ವೇದಭಾಷ್ಯ ರಚನೆ. ಭಾರತೀಯ ಸಂಸ್ಕೃತಿಯ ಜೀವನಾಡಿಯಾದ ನಾಲ್ಕು ವೇದಗಳ ಅರ್ಥವನ್ನು ಆಸ್ತಿಕರು ಸುಲಭವಾಗಿ ತಿಳಿಯುವಂತೆ ಶ್ರೀ ಸಾಯಣಾಚಾರ್ಯರ ಮೂಲಕ ಪ್ರಪ್ರಥಮವಾಗಿ ಭಾಷ್ಯಗಳನ್ನು ರಚನೆ ಮಾಡಿಸಿದ ಕೀರ್ತಿ ಶ್ರೀವಿದ್ಯಾರಣ್ಯರಿಗೂ, ತನ್ಮೂಲಕ ಶೃಂಗೇರಿ ದಕ್ಷಿಣಾಮ್ನಾಯ ಪೀಠಕ್ಕೂ ಸಲ್ಲುತ್ತದೆ. ಇಂದು ವೇದಗಳ ವಿಷಯದಲ್ಲಿ ಸಂಶೋಧನೆ ಮತ್ತು ಅಧ್ಯಯನಗಳನ್ನು ನಡೆಸುತ್ತಿರುವ ನಮ್ಮ ದೇಶದ ಹಾಗೂ ಇತರ ದೇಶಗಳ ವಿದ್ವಾಂಸರುಗಳಿಗೆ ಈ ಭಾಷ್ಯ ಗ್ರಂಥಗಳೇ

WWW.SRINGERI.NET

ಆಧಾರವಾಗಿರುವುದರಿಂದ, ಈ ಭಾಷ್ಯ ಗ್ರಂಥಗಳು ವಿಶ್ವವ್ಯಾಪಕ ಕೀರ್ತಿಯನ್ನು ಗಳಿಸಿವೆ.

ವಿಜಯನಗರ ಸಾಮ್ರಾಜ್ಯ ಅಸ್ತಮಿಸಿದ ನಂತರ, ದಕ್ಷಿಣ ಭಾರತದಲ್ಲುಂಟಾದ ರಾಜಕೀಯ ಬದಲಾವಣೆಗಳಿಂದ ಶ್ರೀ ಶೃಂಗೇರಿ ಧರ್ಮ ಸಂಸ್ಥಾನವು ಅಲ್ಪ ಸ್ವಲ್ಪ ತೊಂದರೆಗಳನ್ನು ಅನುಭವಿಸಬೇಕಾಗಿ ಬಂದಿತು. ಆದರೆ, ಆಚಾರ್ಯರುಗಳ ತಪಃ ಶಕ್ತಿಯ ಫಲವಾಗಿ ಎಂತಹ ವಿಪ್ಲವ ಬಂದರೂ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಮುಂದುವರೆಯಲು ಸಾಧ್ಯವಾಯಿತು. ಆಯಾಯ ಕಾಲದಲ್ಲಿ ಕೆಳದಿ-ಇಕ್ಕೇರಿಯ ನಾಯಕರುಗಳು, ಹೈದರಾಬಾದ್, ಬಿಜಾಪುರ ಹಾಗೂ ಮೈಸೂರಿನ ಮುಸ್ಲಿಮ ರಾಜರುಗಳು, ಮಹಾರಾಷ್ಟ್ರದ ಪೇಶ್ವೆಗಳು, ಮೈಸೂರಿನ ಯದುವಂಶದ ರಾಜರು, ಮತ್ತು ಆಂಗ್ಲ ಅಧಿಕಾರಿಗಳು ಶೃಂಗೇರಿಯ ಪೀಠದ ಜಗದ್ಗುರುಗಳ ಧಾರ್ಮಿಕ ಪರಮೋಚ್ಚ ಸ್ಥಾನವನ್ನು ಎತ್ತಿ ಹಿಡಿದರು ; ದತ್ತಿ - ಕಾಣಿಕೆಗಳನ್ನು ಸಲ್ಲಿಸಿದರು; ಸಂಸ್ಥಾನದ ಹಿತರಕ್ಷಣೆ ಮಾಡಿದರು. ಇವುಗಳಿಗೆ ಸಂಬಂಧಪಟ್ಟ ಎಲ್ಲ ವಿವರಗಳೂ ಅಮೂಲ್ಯ ಐತಿಹಾಸಿಕ ದಾಖಲೆಗಳಾಗಿ ಶ್ರೀ ಮಠದಲ್ಲಿ ಇಂದಿಗೂ ಉಳಿದಿವೆ.

ಭಾರತದಲ್ಲಿ ಪ್ರಜಾಪ್ರಭುತ್ವ ಉದಯವಾದನಂತರ, ಹಿಂದಿನಿಂದ ನಡೆದು ಬಂದಿದ್ದ ಅನೇಕ ವ್ಯವಸ್ಥೆಗಳಲ್ಲಿ ಮಾರ್ಪಾಟುಗಳಾದವು. ವಿಜಯನಗರ ಕಾಲದಿಂದ ಶೃಂಗೇರಿ ಪೀಠಕ್ಕೆ ನಡೆದುಬಂದಿದ್ದ ಜಹಗೀರಿ ವ್ಯವಸ್ಥೆ ರದ್ದಾಯಿತು. ಬೇರೆ ಬೇರೆ ಕಡೆಗಳಲ್ಲಿ ದತ್ತಿಯಾಗಿ ಬಂದಿದ್ದ ಭೂಮಿಗಳು ಕೈತಪ್ಪಿಹೋದವು. ಆದರೂ ಸಹ ಧರ್ಮಪೀಠ ಮತ್ತು ಜಗದ್ಗುರುಗಳವರಲ್ಲಿ ರಾಷ್ಟ್ರದ ಆಸ್ತಿಕ ಜನತೆಗೆ ಇರುವ ಶ್ರದ್ಧೆ, ಅಭಿಮಾನ ಹಾಗೂ ಗೌರವಗಳಿಂದಾಗಿ ಈ ಜಗದ್ಗುರು ಪೀಠವು ಪ್ರಜಾಪ್ರಭುತ್ವದ ಚೌಕಟ್ಟಿಗೆ ಹೊಂದಿಕೊಂಡು ಪರಂಪರಾಗತವಾದ ಕರ್ತವ್ಯಗಳನ್ನು ಮತ್ತಷ್ಟು ಸಮರ್ಥವಾಗಿ ನಿರ್ವಹಿಸಿಕೊಂಡು ಮುಂದುವರೆಯುತ್ತಿದೆ.

WWW.SRINGERI.NET



ಶ್ರೀ ವಿದ್ಯಾಶಂಕರ ದೇವಾಲಯ




ಶ್ರೀ ಚಂದ್ರಮೌಳೀಶ್ವರ

# ಜಗದ್ಗುರು
# ಶ್ರೀಶ್ರೀಶ್ರೀ ಭಾರತೀತೀರ್ಥ
# ಮಹಾಸನ್ನಿಧಾನಂಗಳವರು

ಆಚಾರ್ಯ ಶ್ರೀ ಶಂಕರ ಭಗವತ್ಪಾದರವರಿಂದ ಶೃಂಗೇರಿಯ ಪೀಠಕ್ಕೆ ಕ್ರಿ.ಶ.೮೧೭ರಲ್ಲಿ ಪ್ರಪ್ರಥಮ ಆಚಾರ್ಯರಾಗಿ ನಿಯಮಿತರಾದ ಶ್ರೀ ಸುರೇಶ್ವರಾಚಾರ್ಯರಿಂದ ಆರಂಭವಾಗಿ ಇದುವರೆಗೆ ೩೫ ಜನ ಯತೀಶ್ವರರು ಈ ಪೀಠವನ್ನಲಂಕರಿಸಿದ್ದರು. ಪ್ರಕೃತದಲ್ಲಿ ಪೀಠವನ್ನು ಅಲಂಕರಿಸಿರುವ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳು ೩೬ನೆಯವರು. ಸುಮಾರು ೧೨೦೦ ವರ್ಷಗಳ ಕಾಲದ ಮಹಾಪ್ರವಾಹದಲ್ಲಿ ಈ ಅಪೂರ್ವ ಅವಿಚ್ಛಿನ್ನ ಪರಂಪರೆಯು ಈ ಧರ್ಮಪೀಠವನ್ನು ಸಮರ್ಥವಾಗಿ ಮುನ್ನಡೆಸಿಕೊಂಡು ಬಂದಿದೆ. ಈ ಜಗದ್ಗುರುಗಳ ಪರಂಪರೆಯಲ್ಲಿ ಒಬ್ಬೊಬ್ಬರೂ ಮಹಾಸಾಧಕರು, ಜ್ಞಾನ, ತಪಸ್ಸು, ನೈತಿಕತೆ, ನಿಯಮ ಪಾಲನೆಗಳಿಗೆ ಹೆಸರಾದವರು ಹಾಗೂ ಲೋಕಾನುಭವ ಸಂಪನ್ನರು ಮತ್ತು ಜಗದ್ಗುರು ಎಂಬ ಶಬ್ದಕ್ಕೆ ಸಾರ್ಥಕತೆಯನ್ನು ತಂದುಕೊಟ್ಟವರು. ಈಗ ೩೬ನೇ ಜಗದ್ಗುರುಗಳಾದ ಪರಮಪೂಜ್ಯ ಶ್ರೀ ಶ್ರೀ ಭಾರತೀತೀರ್ಥರೂ ಈ ಎಲ್ಲ ವೈಶಿಷ್ಟ್ಯಗಳನ್ನು ಹೊಂದಿದ್ದು, ಅವರ ನೇತೃತ್ವದಲ್ಲಿ ಪೀಠವು ಮತ್ತೂ ಅಭಿವೃದ್ಧಿಯ ಪಥದಲ್ಲಿ ಸಾಗುತ್ತಿದೆ.

ಜಗದ್ಗುರುಗಳ ಜೀವನವು ಸಂನ್ಯಾಸ ಧರ್ಮಕ್ಕೆ ಒಳಪಟ್ಟಿದ್ದು, ಅದರ ವಿಧಿಗಳನ್ನು ಚಾಚೂತಪ್ಪದೆ ನಡೆಸುತ್ತಾರೆ. ವೇದ ಹಾಗೂ ಶಾಸ್ತ್ರಗಳಲ್ಲಿ ತಳಸ್ಪರ್ಶಿಯಾದ ಪಾಂಡಿತ್ಯವಿದ್ದು, ವೇದಾಂತ, ತರ್ಕ, ಮಿಮಾಂಸಾ ಮತ್ತು ವ್ಯಾಕರಣ ಶಾಸ್ತ್ರಗಳಲ್ಲಿ ನಿಷ್ಣಾತರಾಗಿರುತ್ತಾರೆ. ಯೋಗ್ಯ

WWW.SRINGERI.NET

ವಿದ್ಯಾರ್ಥಿಗಳಿಗೆ ಸ್ವತಃ ಜಗದ್ಗುರುಗಳವರು ವೇದಾಂತ ಮತ್ತು ತರ್ಕ ಶಾಸ್ತ್ರದಲ್ಲಿ ಪಾಠವನ್ನು ಮಾಡುತ್ತಾರೆ.

ಅಗಾಧ ಪಾಂಡಿತ್ಯ ಹಾಗೂ ಆಧ್ಯಾತ್ಮದ ಉತ್ತುಂಗ ಸ್ಥಿತಿಯಲ್ಲಿರುವ ಜಗದ್ಗುರುಗಳು ತಮ್ಮ ಬಳಿಗೆ ಬರುವ ಭಕ್ತರೆಲ್ಲರಿಗೂ ಅನುಗ್ರಹಿಸುತ್ತಿದ್ದಾರೆ. ಆದಿಶಂಕರಾಚಾರ್ಯರಿಂದ ಬಂದ ಈ ಪರಂಪರೆಗೆ ಜೀವಂತ ಸಾಕ್ಷಿಯಾಗಿರುವ ಜಗದ್ಗುರುಗಳು, ಸನಾತನಧರ್ಮದ ಸಂಪ್ರದಾಯವನ್ನು ಕಾಪಾಡುತ್ತ, ಆಧ್ಯಾತ್ಮದ ಮಾರ್ಗದಲ್ಲಿ ಸಾಗುವವರಿಗೆ ಮಾರ್ಗದರ್ಶನ ನೀಡುತ್ತಾರೆ. ನಿತ್ಯ ಸಾವಿರಾರು ಜನರು ಗುರುಗಳ ದರ್ಶನವನ್ನು ಪಡೆದು, ಅಪಾರ ಅನುಗ್ರಹಕ್ಕೆ ಪಾತ್ರರಾಗಿರುತ್ತಾರೆ. ಪ್ರತಿದಿನ ಎರಡು ಬಾರಿ ದರ್ಶನವನ್ನು ಕೊಡುವ ಜಗದ್ಗುರುಗಳು ಕರ್ಮ, ಭಕ್ತಿ ಮತ್ತು ಜ್ಞಾನ ಮಾರ್ಗಗಳಲ್ಲಿ ತೊಡಗುವ ಸಾಧಕರನ್ನು ಅನುಗ್ರಹಿಸುತ್ತಾರೆ.

ಜಗದ್ಗುರುಗಳು ಧರ್ಮಪ್ರಚಾರಕ್ಕೋಸ್ಕರ ದೇಶಾದ್ಯಂತ ಅನೇಕ ಯಾತ್ರೆಗಳನ್ನು ಕೈಗೊಂಡಿದ್ದಾರೆ. ಸಂಸ್ಕೃತ, ಹಿಂದಿ, ಕನ್ನಡ, ತೆಲುಗು ಮತ್ತು ತಮಿಳು ಭಾಷೆಗಳಲ್ಲಿ ನಿರರ್ಗಳವಾಗಿ ಮಾತನಾಡುತ್ತಾರೆ. ಪ್ರತಿಯೊಬ್ಬರು ಅವರವರ ಧರ್ಮವನ್ನು ಅನುಸರಿಸಬೇಕು, ಭಗವಂತನಲ್ಲಿ ಭಕ್ತಿಯನ್ನು, ಧರ್ಮದಲ್ಲಿ ಶ್ರದ್ಧೆಯನ್ನು ಹೊಂದಬೇಕು ಎಂದು ಧರ್ಮೋಪದೇಶಗಳನ್ನು ಮಾಡುತ್ತಾರೆ.

ತಾವು ಸ್ವತಃ ಧರ್ಮವನ್ನು ಅನುಸರಿಸುತ್ತ, ಧರ್ಮತತ್ತ್ವಗಳನ್ನು ಉಪದೇಶಿಸುತ್ತ, ಇಂದಿನ ಯಾಂತ್ರಿಕ ಕಾಲದಲ್ಲೂ ಅರ್ಥಪೂರ್ಣವಾದ, ತೃಪ್ತಿಕರವಾದ ಜೀವನವನ್ನು ನಡೆಸಬಹುದೆಂದು ತೋರಿಸಿಕೊಟ್ಟಿದ್ದಾರೆ.

WWW.SRINGERI.NET

# ಜಗದ್ಗುರು ಶ್ರೀಶ್ರೀಶ್ರೀ ವಿಧುಶೇಖರಭಾರತೀ ಸನ್ನಿಧಾನಂಗಳವರು

ಜಗದ್ಗುರು ಶ್ರೀಮಹಾಸನ್ನಿಧಾನಂಗಳವರು ೨೦೧೫ ರಲ್ಲಿ ೨೨ ವರ್ಷದ ಸಕಲಸದ್ಗುಣ ಸಂಪನ್ನರಾದ ಕುಪ್ಪಾ ವೆಂಕಟೇಶ್ವರಪ್ರಸಾದ ಶರ್ಮಾ ಎಂಬ ಬ್ರಹ್ಮಚಾರಿಗೆ ಸಂನ್ಯಾಸ ದೀಕ್ಷೆಯನ್ನು ಅನುಗ್ರಹಿಸಿ, "ಶ್ರೀ ವಿಧುಶೇಖರಭಾರತೀ" ಎಂಬ ಯೋಗಪಟ್ಟವನ್ನು ನೀಡಿ ತಮ್ಮ ಉತ್ತರಾಧಿಕಾರಿ ಶಿಷ್ಯರನ್ನಾಗಿಸ್ವೀಕರಿಸಿದ್ದಾರೆ.

ಜಗದ್ಗುರು ಶ್ರೀಶ್ರೀ ವಿಧುಶೇಖರಭಾರತೀ ಸನ್ನಿಧಾನಂಗಳವರು ನ್ಯಾಯ ಹಾಗೂ ವೇದಾಂತಾದಿಶಾಸ್ತ್ರಗಳನ್ನು ಶ್ರೀ ಮಹಾಸನ್ನಿಧಾನಂಗಳವರಲ್ಲಿಯೇ ಅಧ್ಯಯನ ಮಾಡಿ, ವೇದ ಹಾಗೂ ಶಾಸ್ತ್ರಗಳಲ್ಲಿ ಮಹಾಪಂಡಿತರಾಗಿದ್ದಾರೆ. ತಮ್ಮ ಗುರುಗಳು ತೋರಿಸಿದ ಮಾರ್ಗವನ್ನೇ ಅನುಸರಿಸುತ್ತಾ, ಅವರ ಜೊತೆಯಲ್ಲಿ ಅನೇಕ ವಿಜಯಯಾತ್ರೆಗಳನ್ನು ಮಾಡಿದ್ದಲ್ಲದೆ, ಗುರುಗಳ ಆಜ್ಞೆ ಮತ್ತು ಆಶೀರ್ವಾದವನ್ನು ಪಡೆದು ಸ್ವತಂತ್ರವಾಗಿ ಅನೇಕ ಯಾತ್ರೆಗಳನ್ನು ಕೈಗೊಂಡು, ಸಂನ್ಯಾಸ ಧರ್ಮವನ್ನು ಪಾಲಿಸುತ್ತಾ, ಎಲ್ಲ ಭಕ್ತರನ್ನು ವಾತ್ಸಲ್ಯದಿಂದ ಅನುಗ್ರಹಿಸುತ್ತಿದ್ದಾರೆ.

## ಶೈಕ್ಷಣಿಕ ಕ್ಷೇತ್ರದಲ್ಲಿ ಶೃಂಗೇರಿಯ ಪಾತ್ರ

ವಿದ್ಯೆಯ ಅಧಿದೇವತೆ ಶ್ರೀ ಶಾರದೆ ಮತ್ತು ಆಚಾರ್ಯವರ್ಯ ಶ್ರೀ ಶಂಕರ ಭಗವತ್ಪಾದರವರ ಈ ಪೀಠದ ಔಚಿತ್ಯಕ್ಕೆ ತಕ್ಕಂತೆ ಜ್ಞಾನ ಸಾಧನವಾದ ಶಿಕ್ಷಣಕ್ಕೆ ಇಲ್ಲಿ ಮೊದಲ ಪ್ರಾಶಸ್ತ್ಯವು ಹಿಂದಿನಿಂದಲೂ ಸಲ್ಲುತ್ತದೆ. ವೇದ-ಶಾಸ್ತ್ರಪಂಡಿತರ ನೆಲೆವೀಡಾದ ಶೃಂಗೇರಿ ಕ್ಷೇತ್ರದಲ್ಲಿ

WWW.SRINGERI.NET



ಶೃಂಗೇರಿಯ ನಾಲ್ಕು ಪಾಲಕ ದೇವತೆಗಳು
ಕಾಳಿಕಾಂಬಾ, ಹನುಮಾನ್, ದುರ್ಗಾ ಮತ್ತು ಕಾಲಭೈರವ



ಶ್ರೀ ಜನಾರ್ಧನಸ್ವಾಮಿ ವಿಗ್ರಹ

WWW.SRINGERI.NET

ಗುರುಕುಲ ಪದ್ಧತಿಯ ಶಿಕ್ಷಣ ಕ್ರಮ ನಡೆದು ಬರುತ್ತಿತ್ತು. ೩೩ನೆಯ ಪೀಠಾಧಿಪತಿಗಳಾಗಿದ್ದ ಶ್ರೀ ಸಚ್ಚಿದಾನಂದ ಶಿವಾಭಿನವ ನರಸಿಂಹ ಭಾರತೀ ಮಹಾಸ್ವಾಮಿಗಳವರು ಕ್ರಿ.ಶ.೧೮೯೫ ರಲ್ಲಿ ಶೃಂಗೇರಿಯಲ್ಲಿ ಶ್ರೀ ಮಠದ ಆವರಣದಲ್ಲಿ ಶ್ರೀ ಸದ್ವಿದ್ಯಾಸಂಜೀವಿನೀ ಸಂಸ್ಕೃತ ಪಾಠಶಾಲೆಯನ್ನು ಪ್ರಾರಂಭಿಸಿದರು. ಅನಂತರ ಕ್ರಿ.ಶ. ೧೯೧೧ರಲ್ಲಿ ಬೆಂಗಳೂರಿನ  ಭವ್ಯವಾದ ಶ್ರೀ ಶಂಕರ ಮಠ ಮತ್ತು ಭಾರತೀಯ ಗೀರ್ವಾಣ ಪ್ರೌಢವಿದ್ಯಾಭಿವರ್ಧಿನೀ ಪಾಠಶಾಲೆ, ಇವುಗಳು ಕೂಡ ಈ ಜಗದ್ಗುರುಗಳವರಿಂದ ಸ್ಥಾಪಿತವಾದವು. ಅಂದಿನಿಂದ ಇಂದಿನವರೆಗೆ ಈ ಎರಡೂ ಸಂಸ್ಕೃತ ವಿದ್ಯಾಲಯಗಳಲ್ಲಿ ಅಧ್ಯಯನ ಮಾಡಿ ಪಾಂಡಿತ್ಯ ಪಡೆದು ಪ್ರಸಿದ್ಧರಾದವರು ದೇಶದ ಅನೇಕ ಕಡೆಗಳಲ್ಲಿ ನೆಲಸಿ ಅಧ್ಯಾಪಕ ವೃತ್ತಿ, ಗ್ರಂಥರಚನೆ, ಮುಂತಾದ ಕಾರ್ಯಗಳಲ್ಲಿ ನಿರತರಾಗಿದ್ದಾರೆ. ಇಂದೂ ಸಹ ಈ ಎರಡು ಸಂಸ್ಕೃತ ಪಾಠಶಾಲೆಗಳಲ್ಲೂ ಸಂಪ್ರದಾಯ ರೀತಿಯಲ್ಲಿ ವೇದ, ಸಾಹಿತ್ಯ, ಮೀಮಾಂಸಾ ವೇದಾಂತ ದರ್ಶನಗಳನ್ನು ಅನೇಕ ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಲಿದ್ದಾರೆ.

ಶೃಂಗೇರಿ ಮತ್ತು ಬೆಂಗಳೂರು ಈ ಎರಡು ಕಡೆಗಳಲ್ಲಿನ ಸಂಸ್ಕೃತ ಪಾಠಶಾಲೆಗಳಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಊಟ ಮತ್ತು ವಸತಿ ಸೌಕರ್ಯವನ್ನು ಕಲ್ಪಿಸಲಾಗಿದೆ. ಇದೇ ಆಚಾರ್ಯ ಶ್ರೀ ಸಚ್ಚಿದಾನಂದ ಶಿವಾಭಿನವ ನರಸಿಂಹ ಭಾರತೀಸ್ವಾಮಿಗಳವರ ನಿಷ್ಠಾಪೂರ್ಣ ಆಸಕ್ತಿಯ ಫಲವಾಗಿ ಗುರುತಿಸಲ್ಪಟ್ಟು ಅಭಿವೃದ್ಧಿ ಮಾಡಲಾಗಿರುವ ಅಚಾರ್ಯ ಶ್ರೀ ಶಂಕರರ ಜನ್ಮ ಸ್ಥಳವಾದ ಕಾಲಟಿಯಲ್ಲಿ ನಡೆಯುತ್ತಿರುವ ವೇದ-ವೇದಾಂತ ಪಾಠಶಾಲೆ, ೩೫ನೇ ಜಗದ್ಗುರುಗಳಾದ ಶ್ರೀಮದಭಿನವ ವಿದ್ಯಾತೀರ್ಥರಿಂದ ಕಾಲಟಿಯಲ್ಲಿ ಸ್ಥಾಪಿತವಾಗಿರುವ ಸಂಸ್ಕೃತ ಮಹಾವಿದ್ಯಾಲಯ, ಶ್ರೀ ಶಂಕರ ಕಲಾಶಾಲೆ, ಶೃಂಗೇರಿಯಲ್ಲಿನ ಶ್ರೀ ಅಭಿನವ ವಿದ್ಯಾತೀರ್ಥ ಬಾಲಿಕಾ ಪ್ರೌಢಶಾಲಾ, ಬೆಳವಾಡಿಯ ಶ್ರೀ ಉದ್ಭವ ಗಣಪತಿ ಪ್ರೌಢಶಾಲಾ, ಬೆಂಗಳೂರಿನ

ಶ್ರೀ ಶಂಕರ ಮಠದ ಆವರಣದಲ್ಲಿ ಪ್ರಾರಂಭವಾಗಿರುವ ಜ್ಞಾನೋದಯ ಶಾಲೆ, ನಂಜನಗೂಡಿನ ಶ್ರೀ ಶಂಕರ ಮಠದಲ್ಲಿನ ವೇದಪಾಠಶಾಲೆ, ಇವುಗಳಲ್ಲದೆ ಭಾರತದ ಅನೇಕ ಕಡೆ ಇರುವ ಶೃಂಗೇರಿ ಧರ್ಮಪೀಠದ ಶಾಖೆಗಳಲ್ಲಿ ವೇದ ಮತ್ತು ಸಂಸ್ಕೃತವನ್ನು ಕಲಿಯುವುದಕ್ಕೆ ಇರುವ ಅವಕಾಶ, ಇವು ತನ್ನ ಅವಶ್ಯವಾದ ಪುರಾತನ ವಿದ್ಯೆಯ ಸಂರಕ್ಷಣೆಯ ಜೊತೆಗೆ, ಕಾಲದ ಪರಿಸ್ಥಿತಿಗೆ ತಕ್ಕಂತೆ ಈಗಿನ ಲೌಕಿಕ ವಿದ್ಯೆಯ ಪ್ರಸಾರದಲ್ಲಿಯೂ ಶೃಂಗೇರಿಯ ಧರ್ಮಪೀಠವು ವಹಿಸುತ್ತಿರುವ ಆಸಕ್ತಿಯ ದ್ಯೋತಕಗಳಾಗಿವೆ. ಇಲ್ಲಿ ಉಲ್ಲೇಖಿಸಲೇ ಬೇಕಾದ ಮತ್ತೊಂದು ವಿಷಯವೆಂದರೆ, ಶ್ರೀ ಶ್ರೀಗಳವರಿಂದ ಸ್ಥಾಪಿತವಾದ ಶ್ರೀ ಸುರಸರಸ್ವತೀ ಸಭಾ ಎಂಬ ಸಂಸ್ಥೆ. ಇದರಲ್ಲಿ ಜಾತಿ-ಮತ ಮುಂತಾದ ಯಾವ ಪರಭೇದವೂ ಇಲ್ಲದೆ ಆಸಕ್ತಿಯುಳ್ಳ ಯಾರಾದರೂ ಸಂಸ್ಕೃತ ಭಾಷೆಯ ಪರಿಚಯವನ್ನು ಮಾಡಿಕೊಳ್ಳಲು ಅವಕಾಶವಿದೆ. ಈ ಸಭೆಯ ಮೂಲಕ ನಾಡಿನ ಅನೇಕ ಸ್ಥಳಗಳಲ್ಲಿ ಸಂಸ್ಕೃತ ಪ್ರಸಾರ ಮತ್ತು ಶಿಕ್ಷಣದ ಸೌಲಭ್ಯ ಆಸಕ್ತರಿಗೆ ದೊರೆಯುತ್ತಿದೆ.

ಆಚಾರ್ಯ ಶ್ರೀ ಶಂಕರರ ಜನ್ಮಸ್ಥಳ ಕಾಲಟಿಯಲ್ಲಿ ಕೇರಳ ಸರ್ಕಾರದ ವತಿಯಿಂದ ಸಂಸ್ಕೃತ ವಿಶ್ವವಿದ್ಯಾನಿಲಯ, ಶೃಂಗೇರಿಯಲ್ಲಿ ಭಾರತ ಸರ್ಕಾರದ ವತಿಯಿಂದ ರಾಜೀವಗಾಂಧೀ ಸಂಸ್ಕೃತ ಕೇಂದ್ರೀಯ ವಿದ್ಯಾಲಯಗಳು ಗುರುವರ್ಯ-ಶ್ರೀ ಶ್ರೀ ಭಾರತೀ ತೀರ್ಥರ ವಿಶೇಷ ಆಸಕ್ತಿಯಿಂದ ಪ್ರತಿಷ್ಠಾಪಿತವಾಗಿ ಮುನ್ನಡೆಯುತ್ತಿವೆ.

ವೇದ-ವೇದಾಂತ ಮುಂತಾದ ಶಾಸ್ತ್ರಗಳಿಗೆ ಸಂಬಂಧಿಸಿದ ಅಪರೂಪದ ಹಾಗೂ ಅಮೂಲ್ಯವಾದ ತಾಳೇಗರಿ ಗ್ರಂಥಗಳನ್ನು ಶ್ರೀ ಶೃಂಗೇರಿಪೀಠವು ನೂರಾರು ವರ್ಷಗಳಿಂದ ಸಂಗ್ರಹಮಾಡಿ ಅತ್ಯಂತ ಜಾಗರೂಕತೆಯಿಂದ ಕಾಪಾಡಿಕೊಂಡು ಬಂದಿದೆ. ಅಲ್ಲದೆ, ಅಮೂಲ್ಯವಾದ ಮುದ್ರಿತ ಹಾಗೂ ಅಮುದ್ರಿತ ಗ್ರಂಥಗಳೂ ಸಹ ಶ್ರೀ ಸರಸ್ವತೀ ಗ್ರಂಥ ಭಂಡಾರದಲ್ಲಿವೆ.

WWW.SRINGERI.NET



ಶ್ರೀ ಶಂಕರ ಭಗವತ್ಪಾದಾಚಾರ್ಯರ ದೇವಾಲಯ

WWW.SRINGERI.NET

ನೂರಾರು ವರ್ಷಗಳ ಐತಿಹಾಸಿಕ ಘಟನೆಗಳೂ ಹಾಗೂ ಧರ್ಮಸಂಸ್ಥಾನದ ಆಡಳಿತ ವಿವರಗಳು ಇವುಗಳನ್ನುಳ್ಳ ಅಮೂಲ್ಯ ಕಡತಗಳ ವಿಪುಲ ಸಂಗ್ರಹ ಸಹಾ ಇದೆ. ಹಿಂದಿನ ಪೀಠಾಧೀಶ ಶ್ರೀ ಶ್ರೀ ಅಭಿನವ ವಿದ್ಯಾತೀರ್ಥರು ಸಂಸ್ಕೃತ ಪಾಠಶಾಲೆಗೆ ಹೊಂದಿಕೊಂಡಂತೆ ಶ್ರೀ ಶಾರದಾ ದೇವಾಲಯದ ಮಹಡಿಯ ಮೇಲೆ ಗ್ರಂಥ ಭಂಡಾರದ ಸುರಕ್ಷಿತ ವ್ಯವಸ್ಥೆ ಏರ್ಪಡಿಸಿ, ಸಂಶೋಧನಾ ವಿದ್ಯಾರ್ಥಿಗಳು ಅಧ್ಯಯನ ಮಾಡುವುದಕ್ಕೆ ಅನುಕೂಲ ಕಲ್ಪಿಸಿದ್ದಾರೆ. ಈ ಸಂದರ್ಭದಲ್ಲಿ ಮಹತ್ವದ ವಿಷಯವೊಂದನ್ನು ಗಮನಿಸಬಹುದು. ಈ ಶತಮಾನದ ಪ್ರಾರಂಭದಲ್ಲಿ ಜರ್ಮನಿಯ ವಿದ್ವಾಂಸ ಮ್ಯಾಕ್ಸ್‌ಮುಲ್ಲರ್ ವೇದ ಭಾಷ್ಯಗಳನ್ನು ಆಂಗ್ಲಾನುವಾದದೊಡನೆ ಮುದ್ರಣ ಮಾಡಲು ಪ್ರಯತ್ನಿಸಿದಾಗ, ಆತನಿಗೆ ಅತ್ಯಗತ್ಯವಾಗಿದ್ದ ಶ್ರೀ ಸಾಯಣ ಭಾಷ್ಯದ ಅಧಿಕೃತ ಶುದ್ಧ ಪ್ರತಿ ಕೊನೆಗೆ ಶೃಂಗೇರಿ ಪೀಠದಿಂದಲೇ ಒದಗಿಸಲ್ಪಟ್ಟಿತು. ಧರ್ಮ ಮತ್ತು ಸಿದ್ಧಾಂತಕ್ಕೆ ಸಂಬಂಧಿಸಿದ ಗ್ರಂಥಗಳನ್ನು ಶ್ರೀ ಮಠದ ಮತಿಯಿಂದ ಪ್ರಕಾಶನ ಮಾಡಲಾಗುತ್ತಿದೆ. ಅಲ್ಲದೆ, ಧಾರ್ಮಿಕ, ವೇದಾಂತ ಮತ್ತು ಸಂಸ್ಕೃತಿ ಪ್ರಸಾರಕ್ಕೆ ಶ್ರೀ ಶಂಕರ ಕೃಪಾ ಎಂಬ ಮಾಸ ಪತ್ರಿಕೆಯನ್ನು ಕನ್ನಡ, ತಮಿಳು, ತೆಲುಗು ಹಾಗೂ ಮಲಯಾಳಂ ಭಾಷೆಗಳಲ್ಲಿ ಮತ್ತು ತತ್ತ್ವಾಲೋಕ ಎಂಬ ಆಂಗ್ಲ ಪತ್ರಿಕೆಯನ್ನೂ ಹೊರಡಿಸಲಾಗುತ್ತಿದೆ.

ಗುರುವರ್ಯ ಶ್ರೀ ಶ್ರೀ ಅಭಿನವ ವಿದ್ಯಾ ತೀರ್ಥರಿಂದ ಸ್ಥಾಪಿತವಾದ ತತ್ತ್ವಾಲೋಕ ಆಂಗ್ಲ ದ್ವೈಮಾಸಿಕ ಪತ್ರಿಕೆಯು ಆಕರ್ಷಕ ರೀತಿಯಲ್ಲಿ ಭಾರತೀಯ-ಸಂಸ್ಕೃತಿ ಸಿದ್ಧಾಂತಗಳ ಬಗ್ಗೆ ಮೌಲಿಕ ಲೇಖನಗಳನ್ನು ಪ್ರಕಟಿಸುತ್ತ ಅಂತರರಾಷ್ಟ್ರೀಯ ವ್ಯಾಪ್ತಿಯನ್ನು ಪಡೆದಿದೆ. ಶ್ರೀಮಠದ ಸಂಸ್ಕೃತ ಮಹಾಪಾಠಶಾಲೆಯಲ್ಲಿ ಗಣಕಯಂತ್ರದ (computer) ಮೂಲಕ ಸ್ವರಾನುದಾತ್ತಸಹಿತ ವೇದಗಳ ಶುದ್ಧ ಪಾಠಗಳನ್ನು ಸಿದ್ಧಪಡಿಸಿ ಮುದ್ರಿಸುವ ಯೋಜನೆಯನ್ನು ಕೈಗೊಳ್ಳಲಾಗಿದ್ದು, ಈಗಾಗಲೇ ಸಾಮವೇದದ ೨ ಭಾಗಗಳು ಮುದ್ರಣಗೊಂಡು ಪ್ರಕಟವಾಗಿವೆ.

WWW.SRINGERI.NET

ಮಾಧವೀಯ ಶಂಕರ ವಿಜಯವನ್ನು ವಿದ್ವಾನ್ ರಂಗನಾಥಶರ್ಮರಿಂದ ಕನ್ನಡಕ್ಕೆ ಅನುವಾದ ಮಾಡಿಸಿ (ಮೂಲಸಹಿತ) ೨ ಸಂಪುಟಗಳಲ್ಲಿ ಪ್ರಕಟಿಸಿರುವುದು ಕನ್ನಡದ ಓದುಗರಿಗೆ ಒಂದು ಮಹತ್ವದ ಕೊಡುಗೆಯೇ ಸರಿ. ಮೊದಲನೇ ಸಂಪುಟವು ಈಗಾಗಲೇ ಹಲವು ಮುದ್ರಣವನ್ನೂ ಕಂಡಿದೆ.

## ವೈದ್ಯಕೀಯ ಸೌಲಭ್ಯಕ್ಕೆ ಕೊಡುಗೆ

ಜಗದ್ಗುರು ಶ್ರೀ ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳವರ ಪೀಠಾರೋಹಣದ ರಜತ ಮಹೋತ್ಸವ ಸಮಾರಂಭವನ್ನು ರಾಷ್ಟ್ರದ ಭಕ್ತಾಭಿಮಾನಿಗಳೂ ಶಿಷ್ಯರೂ ೧೯೭೪ರಲ್ಲಿ ಬಹು ವೈಭವದಿಂದ ಆಚರಿಸಿದರು. ಆ ಬೆಳ್ಳಿ ಹಬ್ಬದ ಜ್ಞಾಪಕಾರ್ಥ ಶೃಂಗೇರಿಯಲ್ಲಿ ಎಲ್ಲ ವರ್ಗದ ಜನ ಸಾಮಾನ್ಯರ ಅನುಕೂಲಕ್ಕಾಗಿ ಶ್ರೀ ಶಾರದಾ ಧನ್ವಂತರೀ ಆಸ್ಪತ್ರೆಯನ್ನು ಸ್ಥಾಪಿಸಲಾಯಿತು. ಶ್ರೀ ಮಠದ ವತಿಯಿಂದ ನಡೆಸಲ್ಪಡುತ್ತಿರುವ ಈ ಆಸ್ಪತ್ರೆಯು ಅತ್ಯಾಧುನಿಕ ಚಿಕಿತ್ಸಾ ಉಪಕರಣಗಳು-ಸುಸಜ್ಜಿತ ಚಿಕಿತ್ಸಾ ವ್ಯವಸ್ಥೆ- ರುಗ್ಣಾಲಯಗಳನ್ನೊಳಗೊಂಡು ಸಕಲ ಸೌಲಭ್ಯಗಳನ್ನೂ ಅಳವಡಿಸಿಕೊಳ್ಳುತ್ತ ಮಲೆನಾಡಿನ ಈ ಗ್ರಾಮಾಂತರ ಪ್ರದೇಶದ ಜನರಿಗೆ ಉಪಯುಕ್ತ ಸೇವೆ ಸಲ್ಲಿಸುತ್ತದೆ. ಸಂಚಾರೀ ಆಸ್ಪತ್ರೆಯ ವ್ಯವಸ್ಥೆಯನ್ನು ಪ್ರಾರಂಭಿಸಿ ಹಳ್ಳಿಗಳಲ್ಲಿ ಮನೆಯ ಬಾಗಿಲಿಗೇ ಹೋಗಿ ವೈದ್ಯಕೀಯ ಸೇವೆ ಸಲ್ಲಿಸುತ್ತಿದೆ. ಚಿಕ್ಕಮಗಳೂರು ಜಿಲ್ಲೆಗೇ ಮೊದಲನೆಯದಾದ ೧೨ ಲಕ್ಷ ರೂ.ಗಳ ರಕ್ತನಿಧಿ ಕೇಂದ್ರ (Blood bank)ವು ಗುರುವರ್ಯ ಶ್ರೀ ಶ್ರೀ ಭಾರತೀ ತೀರ್ಥರ ಆಶ್ರಮ ಸ್ವೀಕಾರದ ರಜತ ಮಹೋತ್ಸವ ಸಮಾರಂಭದ ಸುಸಂದರ್ಭದಲ್ಲಿ ಸ್ಥಾಪಿತವಾಗಿದ್ದು ಈ ಗುಡ್ಡಗಾಡು ಪ್ರದೇಶದ ಜನರಿಗೆ ಇದೊಂದು ಮಹತ್ವದ ಕೊಡುಗೆಯೇ ಸರಿ. ಈ ಆಸ್ಪತ್ರೆಗೆ ಈಚೆಗೆ ಸೇರ್ಪಡೆಯಾಗಿರುವ ಹೊಸ ವಿಭಾಗ - ಅಭಿನವ

WWW.SRINGERI.NET

ವಿದ್ಯಾತೀರ್ಥ ಹೊರರೋಗಿಗಳ ವಾರ್ಡ್. ಈ ಆಸ್ಪತ್ರೆಯು ತಜ್ಞರಾದ ವೈದ್ಯರುಗಳು-ಶುಶ್ರೂಷಕ ವರ್ಗ ಉಳ್ಳದ್ದಾಗಿ ಈ ಪ್ರದೇಶದ ಜನರಿಗೆ ಒಂದು ವರದಾನವೇ ಆಗಿದೆ. ಆಯುರ್ವೇದದ ಅಭಿವೃದ್ಧಿಗಾಗಿಯೂ ಇಲ್ಲಿ ಗಮನ ಹರಿಸಲಾಗುತ್ತಿದೆ. ಬೆಂಗಳೂರು ನಗರದ ಶಂಕರಪುರದಲ್ಲಿಯೂ ಸೌಲಭ್ಯಗಳಿಂದ ಕೂಡಿದ ಶ್ರೀ ಶಾರದಾ ಧನ್ವಂತರೀ ಆಸ್ಪತ್ರೆಯನ್ನು ಶ್ರೀ ಮಠದ ವತಿಯಿಂದ ನಡೆಸಲಾಗುತ್ತಿದೆ. ಜಗದ್ಗುರು ಅಭಿನವವಿದ್ಯಾತೀರ್ಥ ಮಹಾಸ್ವಾಗಳವರ ಪವಿತ್ರವಾದ ಹೆಸರಿನಲ್ಲಿ ಈಗ ಉನ್ನತ ಮಟ್ಟದ ಸೌಕರ್ಯಗಳನ್ನು ಕಲ್ಪಿಸಿ ಆಸ್ಪತ್ರೆಯನ್ನು ನವೀಕರಿಸಲಾಗಿದೆ.

# ಶೃಂಗೇರಿಯಲ್ಲಿರುವ ದೇವಾಲಯಗಳು

## ಶ್ರೀ ಶಾರದಾಂಬಾ


ಶ್ರೀ ಮಠದ ಮಹಾದ್ವಾರದ ಮೂಲಕ ಒಳಕ್ಕೆ ಪ್ರವೇಶಿಸಿ ಸ್ವಲ್ಪ ಮುಂದೆ ಹೋದೊಡನೆಯೇ ನಮ್ಮ ಬಲಗಡೆಗೆ ಕಾಣಿಸುವ ಮುಖಮಂಟಪ ಮತ್ತು ಪಂಚಕಳಶ ಗೋಪುರಗಳನ್ನುಳ್ಳ ಶಿಲಾಮಯ ದೇವಸ್ಥಾನವೇ ಶ್ರೀ ಶಾರದಾಂಬೆಯ ದೇವಾಲಯ. ಆಚಾರ್ಯ ಶಂಕರರು ತುಂಗಾನದಿಯ ಎಡದಂಡೆಯ ಕಲ್ಲು ಹಾಸೊಂದರ ಮೇಲೆ ಶ್ರೀ ಚಕ್ರಯಂತ್ರೋದ್ಧಾರ ಮಾಡಿ ಶ್ರೀ ಶಾರದಾಂಬೆಯ ಶಕ್ತಿಯನ್ನು ಆವಾಹಿಸಿ, ಅದರ ಮೇಲೆ ಶ್ರೀ ಚಂದನ ಮರದ ಶ್ರೀ ಶಾರದಾ ದೇವಿಯ ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡಿದರು. ಆಚಾರ್ಯರುಗಳ ವಸತಿಗಾಗಿ ಆಗಿನ ಕಾಲಕ್ಕೆ ತಕ್ಕಂತೆ ಸರಳವಾದ ಆಶ್ರಮ ನಿರ್ಮಾಣವಾಯಿತು.

ಮುಂದೆ ೧೪ನೇ ಶತಮಾನದಲ್ಲಿ ಶ್ರೀ ವಿದ್ಯಾರಣ್ಯರು ಈ ಚಂದನಮರದ ಶ್ರೀ ಶಾರದಾ ವಿಗ್ರಹದ ಸ್ಥಾನದಲ್ಲಿ ಈಗ ನಾವು ನೋಡುವ ಚಿನ್ನದ ಅಂಶ

WWW.SRINGERI.NET



ಶ್ರೀ ಗುರುನಿವಾಸ





**ಶ್ರೀ ಮಲಹಾನಿಕರೇಶ್ವರ ಲಿಂಗ, ಸ್ತಂಭಗಣಪತಿ ಮತ್ತು ಶ್ರೀ ಭವಾನೀ ಅಮ್ಮನವರು**




**ಶ್ರೀ ಋಷ್ಯಶೃಂಗೇಶ್ವರ ಹಾಗೂ ಕಿಗ್ಗದ ದೇವಸ್ಥಾನ**

ಅಧಿಕವಾಗಿರುವ ಪಂಚಲೋಹದ ಭವ್ಯವಾದ ಶ್ರೀ ಶಾರದಾ ವಿಗ್ರಹದ ಪ್ರತಿಷ್ಠಾಪನೆ ಮಾಡಿ, ಆ ಕಾಲಕ್ಕೆ ತಕ್ಕಂತೆ ದೇವಾಲಯ ನಿರ್ಮಿಸಿದರು. ಅನಂತರ ಈ ಶತಮಾನದ ಪ್ರಾರಂಭದಲ್ಲಿ ೩೩ನೆಯ ಆಚಾರ್ಯ ಶ್ರೀ ಶ್ರೀ ಸಚ್ಚಿದಾನಂದ ಶಿವಾಭಿನವ ನರಸಿಂಹಭಾರತೀ ಮಹಾಸ್ವಾಮಿಗಳು ಈಗಿನ ಶಿಲಾಮಯ ದೇವಾಲಯದ ಪುನರ್ನಿರ್ಮಾಣ ಕೈಗೊಂಡರು. ಅವರ ಶಿಷ್ಯರಾದ ೩೪ನೇ ಆಚಾರ್ಯರಾದ ಮಹಾತಪಸ್ವಿ ಶ್ರೀ ಚಂದ್ರಶೇಖರ ಭಾರತಿಯವರು ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಿ, ಕುಂಭಾಭಿಷೇಕವನ್ನು ಅತ್ಯಂತ ವೈಭವದಿಂದ ನೆರವೇರಿಸಿದರು.

ಈ ದೇವಾಲಯವು ಚೌಕಾಕಾರದಲ್ಲಿದೆ. ತಮಿಳುನಾಡಿನ ಶಿಲ್ಪ ಕಲಾನಿಪುಣರು ಈ ಶಿಲಾಮಯ ದೇವಸ್ಥಾನದ ಒಳಭಾಗವನ್ನು ಭವ್ಯ ಹಾಗೂ ಪ್ರೇಕ್ಷಣೀಯವಾಗಿ ನಿರ್ಮಿಸಿದ್ದಾರೆ. ನಡುವೆ ಗಾಜಿನಂತೆ ಹೊಳಪುಳ್ಳ ಕರಿಯ ಕಲ್ಲಿನ ಗರ್ಭಗೃಹ; ಅದಕ್ಕೆ ಹೊಂದಿಕೊಂಡ ವಿಶಾಲವಾದ ನವರಂಗ, ಅದರಲ್ಲಿ ಚಿದಾನಂದತತ್ತ್ವ, ವೇದಾಂತ ರಹಸ್ಯ ಪ್ರತೀಕಗಳಾದ ಸುಂದರ ಮನೋಹರ ಸ್ತ್ರೀ ದೇವತಾ ಕೆತ್ತನೆಯುಳ್ಳ ಕಂಬ ಶಿಲ್ಪಗಳು; ಈ ಗರ್ಭಗುಡಿಯ ಸಮಾನಾಂತರದಲ್ಲಿ ಸುತ್ತಲೂ ಹೊರಗಡೆಯ ಒಳಭಾಗಕ್ಕೆ ಹೊಂದಿಕೊಂಡಿರುವ ಚಂದ್ರಸಾಲೆ; ನಡುವೆ ಪ್ರದಕ್ಷಿಣಾಪಥ ಅತ್ಯಂತ ಸುಂದರವಾಗಿದೆ. ದೇವಾಲಯದ ಒಳಗಡೆ ಎಡಭಾಗದ ಕಟಾಂಜನದಲ್ಲಿ ಕಾಣಬರುವ ಬೆಳ್ಳಿಯ ಮಂಟಪವೇ ಸುಪ್ರಸಿದ್ಧವಾದ ವ್ಯಾಖ್ಯಾನ ಸಿಂಹಾಸನ. ಪೀಠಾಧಿಪತಿಗಳಾಗಿ ಉಪದೇಶ ಪಡೆಯುವಾಗ ಮತ್ತು ಪಟ್ಟಾಭಿಷೇಕದ ಕಾಲದಲ್ಲಿ ಶ್ರೀ ಶ್ರೀ ಗಳವರು ಇದರಲ್ಲಿ ಆಸೀನರಾಗಿರುತ್ತಾರೆ. ೨೦೧೪ರಲ್ಲಿ ೧೨೭ ಅಡಿ ಎತ್ತರದ ರಾಜಗೋಪುರವನ್ನು, ೨೦೧೭ರಲ್ಲಿ ಸ್ವರ್ಣವಿಮಾನಗೋಪುರವನ್ನು ನಿರ್ಮಿಸಿ ಜಗದ್ಗುರು ಶ್ರೀಮಹಾಸನ್ನಿಧಾನಂಗಳವರ ಕುಂಭಾಭಿಷೇಕವನ್ನು ನೆರವೇರಿಸಿರುತ್ತಾರೆ.

WWW.SRINGERI.NET

## ಶ್ರೀ ಶಕ್ತಿ ಗಣಪತಿ

ಶ್ರೀ ಶಾರದಾಂಬಾ ದೇವಸ್ಥಾನದಲ್ಲಿ ನಾವು ಪ್ರದಕ್ಷಿಣೆಯಾಗಿ ಬರುವಾಗ ಎಡಭಾಗದ ಮೂಲೆಯಲ್ಲಿನ ಸುಂದರವಾದ ಶಿಲಾಮಂಟಪದಲ್ಲಿ ಪ್ರತಿಷ್ಠಿತವಾಗಿರುವ ಶಕ್ತಿಗಣಪತಿಯ ಮೂರ್ತಿಯು ಮನೋಹರವಾಗಿದೆ. ಈ ಗಣಪತಿಯ ವಿಗ್ರಹದಲ್ಲಿ ಬಲಮುರಿಯ ಸೊಂಡಿಲು, ಮತ್ತು ಎಡತೊಡೆಯ ಮೇಲೆ ಶಕ್ತಿ ಕುಳಿತಿದ್ದಾಳೆ. ಇಲ್ಲಿ ನಿತ್ಯಪೂಜೆಯ ಜೊತೆಗೆ, ಪ್ರತಿಪ್ರದೋಷವೂ ವಿಶೇಷ ಪೂಜೆ ನಡೆಯುತ್ತದೆ.

## ಆಚಾರ್ಯ ಶ್ರೀ ಶಂಕರರ ಆಲಯ

ಶ್ರೀ ಶಾರದಾಂಬಾ ದೇವಸ್ಥಾನದ ಎಡಪಕ್ಕದಲ್ಲಿ ಕೆಳಗಡೆ ವಿದ್ಯಾರ್ಥಿ ನಿಲಯ ಮತ್ತು ಮಹಡಿಯ ಮೇಲೆ ವೇದ - ಶಾಸ್ತ್ರಪಾಠಶಾಲೆ ಇರುವ ದೊಡ್ಡ ಚೌಕಿಯ ಮಧ್ಯದಲ್ಲಿ ಚಿಕ್ಕದಾದ ಸರಳ ಸುಂದರ ಶಿಲಾಮಯವಾದ ಭಗವತ್ಪಾದರ ಶಿಲಾಮೂರ್ತಿಯನ್ನು ಹೊಂದಿರುವ, ಶ್ರೀ ಶಂಕರ ಭಗವತ್ಪಾದರ ದೇವಾಲಯವಿತ್ತು. ೨೦೧೧ನೇ ಇಸವಿಯಲ್ಲಿ ಶ್ರೀಮಹಾಸನ್ನಿಧಾನಂಗಳವರು ಶಾರದಾಂಬಾ ದೇವಾಲಯದ ಎಡಭಾಗದಲ್ಲಿ ಭವ್ಯ ಶಿಲಾಮಯ ದೇವಸ್ಥಾನವನ್ನು ನಿರ್ಮಿಸಿ ಅಲ್ಲಿ ಸುಂದರವಾದ ಭಗವತ್ಪಾದರ ಪಂಚಲೋಹದ ಮೂರ್ತಿಯನ್ನು ಪ್ರತಿಷ್ಠಾಪಿಸಿ ಕುಂಭಾಭಿಷೇಕವನ್ನು ನೆರವೇರಿಸಿದರು. ಈ ಆಲಯದ ಎಡಭಾಗದಲ್ಲಿ  ತೋರಣ ಗಣಪತಿಗೆ ಶಿಲಾಮಯ ದೇವಸ್ಥಾನವನ್ನು ನಿರ್ಮಿಸಿ ಕುಂಭಾಭಿಷೇಕವನ್ನು ನೆರವೇರಿಸಿದರು. ೨೦೨೨ನೇ ಇಸವಿಯಲ್ಲಿ ಈ ಎರಡೂ ದೇವಸ್ಥಾನಗಳಿಗೂ ಬಂಗಾರದ ವಿಮಾನಗೋಪುರಗಳನ್ನು ನಿರ್ಮಿಸಿ ಕುಂಭಾಭಿಷೇಕವನ್ನು ನೆರವೇರಿಸಿದರು.

WWW.SRINGERI.NET

## ಶ್ರೀ ವಿದ್ಯಾಶಂಕರ ದೇವಾಲಯ

ಹಸಿರುಡುಗೆಯಿಂದ ಕಂಗೊಳಿಸುತ್ತ ನೀಲ ಆಗಸದೆಡೆಗೆ ತಲೆ ಚಾಚಿನಿಂತ ಗಿರಿಶಿಖರಗಳು ಅವುಗಳ ನಡುವೆ ಮಂಜುಳ ನಿನಾದ ಮಾಡುತ್ತ ಹರಿದು ಬಂದು ಉತ್ತರಕ್ಕೆ ತಿರುಗಿರುವ ಶುಭ್ರ ತಿಳಿನೀರಿನ ತುಂಗಾನದಿ. ನದಿಯ ಎಡದಂಡೆಯ ಎತ್ತರ ಪ್ರದೇಶದಲ್ಲಿ ಹೊಳೆಯುವ ಕಳಶವನ್ನುಳ್ಳ ಬಹುದೊಡ್ಡ ರಥದಂತಿರುವ ಶಿಲಾಮಯ ಶ್ರೀ ವಿದ್ಯಾಶಂಕರ ದೇವಾಲಯವನ್ನು ನೋಡಿದಾಗ ಆನಂದವಾಗುತ್ತದೆ. ಪೀಠದ ೧೦ನೇ ಆಚಾರ್ಯ ಯೋಗಸಿದ್ಧ ಶ್ರೀ ಶ್ರೀ ವಿದ್ಯಾತೀರ್ಥರು ಕೊನೆಯಲ್ಲಿ ನದೀತೀರದ ಗುಹೆಯನ್ನು ಪ್ರವೇಶಿಸಿ ಲಂಬಿಕಾಯೋಗ ನಿರತರಾದರು. ಅವರ ಸಮಾಧಿಯಮೇಲೆ ಅವರ ಶಿಷ್ಯ ಶ್ರೀ ಶ್ರೀ ಭಾರತೀತೀರ್ಥರು ಕ್ರಿ. ಶ. ೧೩೩೮ ರಲ್ಲಿ ಈ ದೇವಸ್ಥಾನವನ್ನು ನಿರ್ಮಾಣ ಮಾಡಿಸಿ ಶ್ರೀ ವಿದ್ಯಾಶಂಕರ ಎಂಬ ಹೆಸರಿನಲ್ಲಿ ಶಿವಲಿಂಗವನ್ನು ಪ್ರತಿಷ್ಠಿಸಿದರು. ಈ ದೇವಾಲಯವು ಹೊಯ್ಸಳ (ಚಾಳುಕ್ಯ), ದ್ರಾವಿಡ ಹಾಗೂ ವಿಜಯನಗರ ಶಿಲ್ಪಕಲಾ ಚಾತುರ್ಯ ತಾಂತ್ರಿಕ ನೈಪುಣ್ಯಗಳ ದೃಷ್ಟಿಯಿಂದ ಪ್ರಖ್ಯಾತಿ ಪಡೆದಿದೆ. ಶಿಲ್ಪಕಲಾ ಪ್ರಪೂರ್ಣರು ಈ ಪ್ರದೇಶದಲ್ಲಿ ದೊರೆಯುವ ಗಟ್ಟಿ ಶಿಲೆಯನ್ನು ಆಯ್ದುಕೊಂಡು, ಅದರಲ್ಲಿ ತಮ್ಮ ಕಲಾಚಾತುರ್ಯವನ್ನು ಅದ್ಭುತವಾಗಿ ಒಡಮೂಡಿಸಿದ್ದಾರೆ. ಅಡಿಯಿಂದ ಮೇಲಿನ ತನಕ ದೇವಸ್ಥಾನದ ಹೊರಭಾಗ ಮತ್ತು ಒಳಭಾಗಗಳು ವಿಶಿಷ್ಟ ಕೆತ್ತನೆಯ ಕೆಲಸದಿಂದ ಶೋಭಾಯಮಾನವಾಗಿವೆ.

ಲಂಬ ಅರ್ಧವೃತ್ತಾಕಾರದಲ್ಲಿರುವ ಈ ದೇವಾಲಯದ ಹೊರ ಭಾಗವು ಶೈವ-ಶಾಕ್ತ-ವೈಷ್ಣವ ಮತ್ತು ರಾಮಾಯಣ ಹಾಗೂ ಮಹಾಭಾರತ ಮುಂತಾದ ಪೌರಾಣಿಕ ಘಟನೆಗಳಿಗೆ ಸಂಬಂಧಿಸಿ ಹಲವು ಶಿಲ್ಪಗಳಿಂದ ಅಲಂಕೃತವಾಗಿದೆ. ಗರ್ಭಗೃಹದಲ್ಲಿ ಭವ್ಯವಾದ ಶ್ರೀ ವಿದ್ಯಾಶಂಕರರ

ಲಿಂಗ, ಹೊರಗಡೆ ಅರ್ಧಮಂಟಪದಲ್ಲಿ ಮಹಿಷಮರ್ದಿನಿ, ವಿದ್ಯಾಗಣಪತಿ, ಗರ್ಭಗೃಹದ ಕಿರಿದಾದ ಒಳಪ್ರದಕ್ಷಿಣೆಯಲ್ಲಿ ದಕ್ಷಿಣದ ಕಡೆ ಬ್ರಹ್ಮ, ಪಶ್ಚಿಮ ದಿಕ್ಕಿನಲ್ಲಿ ವಿಷ್ಣು ಮತ್ತು ಉತ್ತರದಲ್ಲಿ ಮಹೇಶ್ವರನ ಮೂರ್ತಿ ಶಿಲ್ಪಗಳಿವೆ.

ದೇವಸ್ಥಾನದ ಒಳಗಡೆಯ ನವರಂಗದಲ್ಲಿ ಖಗೋಳ ಶಾಸ್ತ್ರಕ್ಕನುಗುಣವಾಗಿ ಮೇಷಾದಿ ಹನ್ನೆರಡು ರಾಶಿಗಳ ಸಂಕೇತವುಳ್ಳ ಹನ್ನೆರಡು ಕಂಬಗಳು ಚೌಕಾಕಾರದಲ್ಲಿವೆ. ಆಯಾಯ ಮಾಸದಲ್ಲಿ ಉದಯ ರವಿಯ ಪ್ರಥಮ ಕಿರಣಗಳು ಆಯಾಯ ರಾಶಿ ಸಂಕೇತದ ಕಂಬದ ಮೇಲೆ ಬೀಳುವಂತೆ ಯೋಜಿಸಿರುವ ಶಿಲ್ಪಕಲಾಚಾತುರ್ಯ ಅತ್ಯದ್ಭುತವಾದುದು. ಇನ್ನೂ ಇಂತಹ ಅನೇಕ ವೈಶಿಷ್ಟ್ಯಗಳು ಈ ದೇವಸ್ಥಾನದಲ್ಲಿದೆ.

ಈ ದೇವಸ್ಥಾನದ ಎಡಗಡೆ ಇರುವ ಶ್ರೀ ಜನಾರ್ದನ ದೇವಸ್ಥಾನವು ೯-೧೦ನೇ ಶತಮಾನದಲ್ಲಿ ೪ನೇ ಆಚಾರ್ಯ ಶ್ರೀ ಜ್ಞಾನಘನರ ಕಾಲದಲ್ಲಿ ನಿರ್ಮಿತವಾದುದೆಂದು ತಿಳಿದುಬಂದಿದೆ. ಈ ದೇವಸ್ಥಾನದ ಎಡ-ಬಲಗಳ ಗೋಡೆಗೆ ಹೊಂದಿಕೊಂಡು ಅರ್ಧಮಂಟಪದಲ್ಲಿ ಸುಮಾರು ಆರು ಅಡಿ ಎತ್ತರದ ಉಬ್ಬುಕೆತ್ತನೆಯ ಗರುಡ-ಹನುಮಂತರ ಭವ್ಯಶಿಲ್ಪಗಳಿವೆ.

ಶ್ರೀ ಶಾರದಾ ದೇವಸ್ಥಾನದ ಬಲಭಾಗದಲ್ಲಿ, ಪೀಠದ ಮೊದಲ ಆಚಾರ್ಯ ಶ್ರೀ ಸುರೇಶ್ವರರ ಅಧಿಷ್ಠಾನ, ಅದರ ಹಿಂಭಾಗದಲ್ಲಿ ಶ್ರೀ ವಾಗೀಶ್ವರಿ, ವಿದ್ಯಾರಣ್ಯರ ಗುಡಿ, ಅದರ ಬಲಪಕ್ಕದಲ್ಲಿ ಹಿಂದಿನ ಗುರುವರ್ಯರ ಕೆಲವು ಅಧಿಷ್ಠಾನಗಳು; ಅವುಗಳ ಬಲಗಡೆ ತುಂಗಾನದಿಯ ಸ್ನಾನಘಟ್ಟಕ್ಕೆ ಹೊಂದಿಕೊಂಡಂತೆ ಶ್ರೀ ಬಾಲಸುಬ್ರಹ್ಮಣ್ಯ (ಕುಮಾರ) ಸ್ವಾಮಿಯ ಗುಡಿ ಇದೆ. ಶ್ರೀ ಶಾರದಾ ದೇವಸ್ಥಾನದ ಮುಂಭಾಗದಲ್ಲಿ ಸುಮಾರು ೬೦ ಅಡಿ ಎತ್ತರದ ಒಂದೇಕಲ್ಲಿನ ಸ್ತಂಭವೊಂದಿದೆ.

WWW.SRINGERI.NET

## ಕಪ್ಪೇ ಶಂಕರ

ಸ್ನಾನಘಟ್ಟದಲ್ಲಿ ಸೋಪಾನಗಳನ್ನು ಇಳಿದು ಹೋದರೆ ನದಿಗೆ ಸಮೀಪದಲ್ಲಿ ಒಂದು ಚಿಕ್ಕಮಂಟಪದಲ್ಲಿ ಶಿವಲಿಂಗ-ಕಪ್ಪೆ - ಅದಕ್ಕೆ ಬಿಸಿಲಿನ ಝಳ ಬೀಳದಂತೆ ಹೆಡೆ ಬಿಚ್ಚಿ ನೆರಳು ನೀಡುತ್ತಿರುವ ಸರ್ಪ - ಈ ಶಿಲ್ಪವನ್ನು ನೋಡಬಹುದು. ಪಶ್ಚಿಮ ಘಟ್ಟದ ಅಂಚನ್ನೇ ಅನುಸರಿಸಿ ಶ್ರೀ ಶಂಕರರು ತಮ್ಮ ಶಿಷ್ಯರೊಡನೆ ಇಲ್ಲಿಗೆ ಬಂದಾಗ, ನಡು ಮಧ್ಯಾಹ್ನದ ಸುಡು ಬಿಸಿಲಿನಲ್ಲಿ ಸರ್ಪವೊಂದು ಕಪ್ಪೆಯೊಂದಕ್ಕೆ ಹೆಡೆ ಬಿಚ್ಚಿ ನೆರಳು ಉಂಟುಮಾಡುತ್ತಿದ್ದುದನ್ನು ಕಂಡು ಇದು ನಿರ್ವೈರ ಸ್ಥಳ ಎಂದು ನಿರ್ಧರಿಸಿಕೊಂಡ ಶ್ರೀ ಶಂಕರರು ತಮ್ಮ ಮೊದಲ ಧರ್ಮಪೀಠವನ್ನು ಇಲ್ಲಿಯೇ ಪ್ರಾರಂಭಿಸಿದರೆಂಬುದರ ಸಂಕೇತವೇ ಇದು.

## ನರಸಿಂಹವನ

ತುಂಗಾನದಿಯ ಬಲಭಾಗದ ದಂಡೆಯ ಮೇಲೆ ಕಾಲಭೈರವನ ಗುಡ್ಡದ ತಪ್ಪಲಿನಲ್ಲಿ ನರಸಿಂಹವನ ಕಂಗೊಳಿಸುತ್ತಿದೆ. ೩೩ನೇ ಆಚಾರ್ಯ ಶ್ರೀ ಶ್ರೀ ಸಚ್ಚಿದಾನಂದ ಶಿವಾಭಿನವ ನರಸಿಂಹ ಭಾರತಿಗಳು ಏಕಾಂತದಲ್ಲಿ ತಪಸ್ಸು, ಧ್ಯಾನ ನಡೆಸಲು ಅನುಕೂಲವಾಗುವಂತೆ ಈ ಆಶ್ರಮವನ್ನು ನಿರ್ಮಾಣ ಮಾಡಿಸಿದರು. ಸಮೃದ್ಧವಾದ ತೆಂಗಿನ ತೋಟ, ಫಲವೃಕ್ಷಗಳು ಹಾಗೂ ಹೂವಿನ ತೋಟಗಳಿಂದ ಕಂಗೊಳಿಸುವ ಈ ನರಸಿಂಹವನದಲ್ಲಿರುವ ಶ್ರೀ ಸಚ್ಚಿದಾನಂದ ವಿಲಾಸವು ಶ್ರೀ ಶ್ರೀಗಳವರು ಅರ್ಚನೆ ಮಾಡುವ ಶ್ರೀ ಚಂದ್ರಮೌಳೀಶ್ವರ ಲಿಂಗ, ರತ್ನಗರ್ಭ ಗಣಪತಿ, ಶ್ರೀ ಚಕ್ರಗಳ ಪೂಜಾಗೃಹವಾಗಿರುತ್ತದೆ ಮತ್ತು ಶ್ರೀ ಶ್ರೀ ಜಗದ್ಗುರುಗಳವರು ಇಲ್ಲಿಯೇ ವಾಸಿಸುತ್ತಾರೆ.

WWW.SRINGERI.NET

ಇದರ ಎಡಭಾಗದಲ್ಲಿ ೩೩ನೇ ಆಚಾರ್ಯ ಯೋಗಿ ಶ್ರೀ ಶ್ರೀ ಸಚ್ಚಿದಾನಂದ ಶಿವಾಭಿನವ ನರಸಿಂಹ ಭಾರತಿಯವರ ಮತ್ತು ೩೪ನೇ ಆಚಾರ್ಯ ಜೀವನ್ಮುಕ್ತ ಶ್ರೀ ಶ್ರೀ ಚಂದ್ರಶೇಖರ ಭಾರತಿಯವರ ಶಿಲಾಮಯ ಅಧಿಷ್ಠಾನಗಳಿವೆ. ೧೯೮೯ರಲ್ಲಿ ಬ್ರಹ್ಮೈಕ್ಯರಾದ ೩೫ನೇ ಆಚಾರ್ಯ ಶ್ರೀ ಶ್ರೀ ಅಭಿನವ ವಿದ್ಯಾತೀರ್ಥರ ಸಮಾಧಿ ಸ್ಥಳವು ಇದರ ಬಲಭಾಗದಲ್ಲಿದೆ.

ಅದರ ಮೇಲೆ ಸುಂದರ ಶಿಲಾಮಯ ಅಧಿಷ್ಠಾನ ನಿರ್ಮಿಸಲ್ಪಟ್ಟ ಬ್ರಹ್ಮೈಕ್ಯ ಗುರುವರ್ಯರ ವರ್ಣಮಯ ಅಮೃತ ಶಿಲಾ ಮೂರ್ತಿ ಪ್ರತಿಷ್ಠಿಸಲ್ಪಟ್ಟಿದೆ. ಗುರುವರ್ಯರ ಸಹಜ ವ್ಯಕ್ತಿತ್ವ ಮತ್ತು ಜೀವಂತಿಕೆಯ ಭಾವವನ್ನು ಹೊರ ಸೂಸುತ್ತಿರುವ ಈ ವಿಗ್ರಹವು ಸಂದರ್ಶಕರ ಗಮನ ಸೆಳೆಯುತ್ತಿದೆ. ಈ ಮೂರ್ತಿಯ ಪ್ರತಿಷ್ಠಾಪನೆ ಮತ್ತು ೮೦ ವರ್ಷಗಳ ನಂತರದಲ್ಲಿ ಶ್ರೀ ಶಾರದಾಂಬೆಗೆ ಕುಂಭಾಭಿಷೇಕಗಳನ್ನು ಗುರುವರ್ಯ ಶ್ರೀ ಶ್ರೀ ಭಾರತೀ ತೀರ್ಥರು ೧೯೯೩ರಲ್ಲಿ ಶಾಸ್ತ್ರೀಯ ರೀತಿಯಲ್ಲಿ ವೈಭವದಿಂದ ನೇರವೇರಿಸಿದರು.

## ಚತುರ್ವಿದ್ಯೇಶ್ವರಮೂರ್ತಿ

ಸ್ನಾನಘಟ್ಟದ ಸೋಪಾನಗಳ ಮೇಲೆ ನಿಂತು ನೇರವಾಗಿ ದೃಷ್ಟಿಹಾಯಿಸಿದರೆ, ತುಂಗಾನದಿಯ ಎಡದಂಡೆಯಲ್ಲಿ ಸ್ವಲ್ಪ ಎತ್ತರದ ಹಾಸುಬಂಡೆಯ ಮೇಲೆ ಚಿಕ್ಕಗುಡಿಯೊಂದು ಕಾಣಿಸುತ್ತದೆ. ಈ ಚಿಕ್ಕ ದೇವಸ್ಥಾನದ ಒಳಗಿರುವ ದೇವತಾ ಶಿಲ್ಪ ಮತ್ತೆಲ್ಲೂ ಕಾಣಸಿಗದ ಅಪರೂಪ ಶಿಲ್ಪವಾಗಿದೆ.

ಚೌಕಾಕಾರದ ಲಿಂಗದಂತಿರುವ ಶಿಲಾಸ್ತಂಭದ ಪೂರ್ವದಿಕ್ಕಿನ ಮುಖದಲ್ಲಿ ಮಧ್ಯದಲ್ಲಿ ಶ್ರೀ ವಿದ್ಯಾತೀರ್ಥರು, ಎಡಬಲಗಳಲ್ಲಿ ಶ್ರೀ ವಿದ್ಯಾರಣ್ಯರು ಮತ್ತು ಶ್ರೀ ಭಾರತೀತೀರ್ಥರು, ದಕ್ಷಿಣ, ಪಶ್ಚಿಮ ಮತ್ತು

WWW.SRINGERI.NET

ಉತ್ತರ ದಿಕ್ಕುಗಳ ಮುಖದಲ್ಲಿ ಕ್ರಮವಾಗಿ ಬ್ರಹ್ಮ ವಿಷ್ಣು, ಮಹೇಶ್ವರ ವಿಗ್ರಹಗಳನ್ನು ಕೆತ್ತಲಾಗಿದೆ. ಬ್ರಹ್ಮ ವಿಷ್ಣು, ಇವರುಗಳ ಪ್ರಭಾವಳಿಗಳು ದಶಾವತಾರ ಚಿತ್ರಗಳ ಕೆತ್ತನೆಗಳಿಂದ ಕೂಡಿವೆ. ಪೂರ್ವದಿಕ್ಕಿನಲ್ಲಿ ಶ್ರೀ ವಿದ್ಯಾತೀರ್ಥರ ಪ್ರಭಾವಳಿಯಲ್ಲಿ ಮೇಲುಗಡೆ ಶ್ರೀ ಲಕ್ಷ್ಮೀನರಸಿಂಹ ಸ್ವಾಮಿಯ ಮೂರ್ತಿ. ಈ ಕಂಬಶಿಲ್ಪದ ನೆತ್ತಿಯನ್ನು ಪಾಣಿಪೀಠ ಸಹಿತವಾದ ಶಿವಲಿಂಗ ಅಲಂಕರಿಸಿದೆ. ಒಂದೇ ಕಲ್ಲಿನ ಈ ಅಪೂರ್ವ ವಿಗ್ರಹವು ಯೋಗ ವೇದಾಂತಗಳ ರಹಸ್ಯವನ್ನೊಳಗೊಂಡಿದೆ.

## ಹರಿಹರೇಶ್ವರ ದೇವಾಲಯ

ಶ್ರೀ ಮಠದ ಹೆಬ್ಬಾಗಿಲಿನಿಂದ ಎಡಗಡೆಗೆ ಹೋಗುವ ರಸ್ತೆಗೆ 'ಹರಿಹರ ದೇವರ ಬೀದಿ' ಎಂದು ಹೆಸರು. ಈ ರಸ್ತೆಯ ಕೊನೆಯಲ್ಲಿ ಎತ್ತರವಾದ ಸ್ಥಳದಲ್ಲಿ ಹರಿಹರೇಶ್ವರ ದೇವಾಲಯವಿದೆ. ಶಿವಕೇಶವರಲ್ಲಿ ಸಮಾನತೆಯನ್ನು ಸಾರುವ ಶ್ರೀ ಶಂಕರರ ತತ್ತ್ವವನ್ನು ಪ್ರತಿಬಿಂಬಿಸುವಂತೆ ಅರ್ಧಭಾಗ ಶೈವ ಚಿಹ್ನೆಯನ್ನೂ, ಅರ್ಧಭಾಗ ವೈಷ್ಣವ ಚಿಹ್ನೆಯನ್ನೂ ಹೊಂದಿರುವ ಹರಿಹರದೇವರ ಮೂರ್ತಿ ಇಲ್ಲಿದೆ.

# ಮಲಹಾನಿಕರೇಶ್ವರ ದೇವಸ್ಥಾನ

ಊರಿನ ಮಧ್ಯದಲ್ಲಿ ಚಿಕ್ಕ ಬೆಟ್ಟದ ಮೇಲಿರುವ ವಿಶಾಲವಾದ ಪುರಾತನ ದೇವಾಲಯವನ್ನು ಮಲ್ಲಿಕಾರ್ಜುನ, ಮಲಹಾನಿಕರೇಶ್ವರ ಹೆಸರುಗಳಿಂದ ಕರೆಯುವ ರೂಢಿ ಇದೆ. ಪ್ರಾರಂಭದಲ್ಲಿಯೇ ತಿಳಿಸಿರುವಂತೆ ಮಹರ್ಷಿ ಋಷ್ಯಶೃಂಗರ ತಂದೆ ಮಹರ್ಷಿ ವಿಭಾಂಡಕರ ಆಶ್ರಮವಿದ್ದ ಸ್ಥಳ ಇದು. ಇಲ್ಲಿ ಇರುವ ಪುರಾತನವಾದ ಶಿವಲಿಂಗದ ಉಪಾಸಕರಾಗಿದ್ದ ಮಹರ್ಷಿ ವಿಭಾಂಡಕರು ಕೊನೆಗೆ ಇದೇ ಶಿವಲಿಂಗದಲ್ಲಿ ಐಕ್ಯರಾದರು.

WWW.SRINGERI.NET

ಶಿಲಾಮಯ ಗರ್ಭಗುಡಿ, ನವರಂಗ ಮತ್ತು ಗೋಪುರಗಳಿಂದ ಕೂಡಿರುವ ಈ ದೇವಾಲಯವು ಪುರಾತನವಾದುದು. ಗರ್ಭಗೃಹದಲ್ಲಿ ಎತ್ತರವಾದ ಶಿವಲಿಂಗ, ನವರಂಗದಲ್ಲಿ ಕಲಾಪೂರ್ಣವಾದ ನಾಲ್ಕು ಸ್ತಂಭಗಳು, ಅವುಗಳಲ್ಲಿ ಕೆತ್ತಿರುವ ಹತ್ತು ಕೈಗಳಿಂದ ಕೂಡಿದ ಚಂದ್ರ, ಕಾಳಿಯ ಮರ್ದನ, ಷಣ್ಮುಖ ಹಾಗೂ ನರ್ತಕಿಯರ ಶಿಲ್ಪಗಳು ಸುಂದರವಾಗಿವೆ. ಈ ದೇವಸ್ಥಾನದ ಎಡಭಾಗದಲ್ಲಿ ಹೊಂದಿಕೊಂಡಿರುವ ಶ್ರೀ ಭವಾನೀ ಅಮ್ಮನವರ ದೇವಸ್ಥಾನವು ಶ್ರೀ ಶ್ರೀ ಸಚ್ಚಿದಾನಂದ ಭಾರತಿಯವರ ಕಾಲದಲ್ಲಿ (ಕ್ರಿ.ಶ. ೧೬೨೨-೧೬೨೩) ನಿರ್ಮಿತವಾಯಿತು. ಮಲಹಾನಿಕರೇಶ್ವರ ಮತ್ತು ಭವಾನೀ ದೇವಾಲಯಗಳನ್ನು ೩೫ನೇ ಆಚಾರ್ಯ ಶ್ರೀ ಶ್ರೀ ಅಭಿನವ ವಿದ್ಯಾತೀರ್ಥರು ಪುನರ್ನಿರ್ಮಾಣ ಮಾಡಿಸಿ, ೧೯೮೫ರಲ್ಲಿ ಬಹು ವೈಭವದಿಂದ ಕುಂಭಾಭಿಷೇಕ ನೆರವೇರಿಸಿದರು. ದೇವಸ್ಥಾನವನ್ನು ಮಹಾದ್ವಾರದಿಂದ ಪ್ರವೇಶಿಸುತ್ತಿದ್ದಂತೆಯೇ ಬಲಗಡೆ ಸ್ತಂಭ ಗಣಪತಿ ಇದೆ. ಇದರ ಬಗ್ಗೆ ಒಂದು ಐತಿಹ್ಯವುಂಟು. ಮಂತ್ರಸಿದ್ಧರಾಗಿದ್ದ ೨೪ನೇ ಆಚಾರ್ಯ ಶ್ರೀ ಶ್ರೀ ಅಭಿನವ ನರಸಿಂಹ ಭಾರತಿಯವರು (ಕ್ರಿ.ಶ. ೧೫೯೯-೧೬೨೨) ಶ್ರೀ ಮಲಹಾನಿಕರೇಶ್ವರ ಸ್ವಾಮಿಗೆ ಪೂಜೆಯನ್ನು ಆರಂಭ ಮಾಡುವುದಕ್ಕೆ ಮುಂಚೆ ಗಣಪತಿಯ ವಿಗ್ರಹ ಇಲ್ಲದಿರುವುದನ್ನು ಕಂಡು ಕಲ್ಲಿನ ಕಂಬದ ಮೇಲೆ ಅರಿಶಿನ ಕೊಂಬಿನಿಂದ ಗಣಪತಿಯ ಆಕಾರವನ್ನು ಬರೆದು ಪೂಜೆಯನ್ನು ಸಲ್ಲಿಸಿದರು. ನಂತರ ಅವರು ಬರೆದಿದ್ದ ಚಿತ್ರದಂತೆಯೇ ಗಣೇಶನ ಆಕಾರ ಸ್ಪಷ್ಟವಾಗಿ ಮೂಡಿಬಂದಿದೆ. ಆಕಾರ ಮೂಡಿರುವ ಭಾಗವು ಒಳಗಡೆ ಟೊಳ್ಳಾಗಿರುವುದು ಶಬ್ದದಿಂದ ಗೊತ್ತಾಗುತ್ತದೆ. ಕಂಬದ ಉಳಿದ ಭಾಗ ಎಂದಿನಂತೆ ಗಟ್ಟಿಯಾಗೇ ಇದೆ.

WWW.SRINGERI.NET

# ರಕ್ಷಕ ದೇವತಾ ಆಲಯಗಳು

ಅಚಾರ್ಯ ಶ್ರೀ ಶಂಕರರು ಶ್ರೀ ಶಾರದಾಂಬೆಯನ್ನು ಪ್ರತಿಷ್ಠಾಪನೆ ಮಾಡಿದ ನಂತರ, ಈ ಕ್ಷೇತ್ರದ ರಕ್ಷಣೆಗಾಗಿ ನಾಲ್ಕು ದಿಕ್ಕುಗಳಲ್ಲಿ ನಾಲ್ವರು ರಕ್ಷಕ ದೇವತೆಗಳನ್ನು ಪ್ರತಿಷ್ಠೆ ಮಾಡಿರುತ್ತಾರೆ.

## ಶ್ರೀ ಕಾಲಭೈರವ

ನರಸಿಂಹವನಕ್ಕೆ ಹೊಂದಿಕೊಂಡಿರುವ ಗುಡ್ಡದ ಮೇಲೆ ಚಿಕ್ಕದೇಗುಲದಲ್ಲಿ ಭವ್ಯವಾದ ಕಾಲಭೈರವಮೂರ್ತಿ ಇದೆ. ಇವನು ಈ ಕ್ಷೇತ್ರದ ಪೂರ್ವದಿಕ್ಕಿನ ರಕ್ಷಕನಾಗಿ ನಿಂತಿದ್ದಾನೆ.

## ಶ್ರೀ ಆಂಜನೇಯ

ಹರಿಹರ ಬೀದಿಯಲ್ಲಿ ಮುಂದೆಹೋಗಿ ಎಡಕ್ಕೆ ತಿರುಗಿಕೊಂಡರೆ, ಕೆರೆದಂಡೆ ಎಂಬ ಪ್ರದೇಶ ಸಿಗುತ್ತದೆ. ಕ್ಷೇತ್ರದ ಪಶ್ಚಿಮ ದಿಕ್ಕಿನ ರಕ್ಷಕನಾಗಿ ಹನುಮಂತದೇವರ ಗುಡಿ ಇದೆ.

## ಶ್ರೀ ದುರ್ಗಾಂಬಾ

ಶೃಂಗೇರಿಯಿಂದ ನೆಮ್ಮಾರಿಗೆ ಹೋಗುವ ಹೆದ್ದಾರಿಯ ಎಡಭಾಗದಲ್ಲಿ ಶ್ರೀ ದುರ್ಗಾ ದೇವಿಯ ದೇವಸ್ಥಾನವಿದೆ. ಪ್ರಭಾವಳಿ ಸಹಿತವಾದ ಶಿಲಾಮಯ ದುರ್ಗಾಂಬಿಕೆಯ ಮೂರ್ತಿ ಇರುವ ಈ ಸ್ಥಳ, ದುರ್ಗಾ ದೇವಸ್ಥಾನವೆಂದೇ ಪ್ರಸಿದ್ಧವಾಗಿದೆ. ಕ್ಷೇತ್ರದ ದಕ್ಷಿಣ ದಿಕ್ಕಿನ ರಕ್ಷಕಿಯಾಗಿ ನಿಂತಿದ್ದಾಳೆ ಶ್ರೀ ದುರ್ಗಾಂಬಾ.

WWW.SRINGERI.NET

## ಶ್ರೀ ಕಾಳಿಕಾಂಬಾ

ಶೃಂಗೇರಿಯಿಂದ ಜಯಪುರಕ್ಕೆ ಹೋಗುವ ರಸ್ತೆಯಲ್ಲಿ ಶ್ರೀ ಕಾಳಿಕಾಂಬಾ ದೇವಾಲಯವಿದೆ. ಕ್ಷೇತ್ರದ ಉತ್ತರ ದಿಕ್ಕಿನ ರಕ್ಷಕ ದೇವತೆಯ ಈ ದೇವಾಲಯದ ಬಳಿಯೇ ಪ್ರತಿವರ್ಷ ವಿಜಯದಶಮಿಯಂದು ರಾತ್ರಿ ಶ್ರೀ ಶಾರದಾಂಬೆಯ ವಿಜಯೋತ್ಸವದ ಅಂಗವಾಗಿ ಶಮೀಪೂಜೆಯು ನಡೆಯುತ್ತದೆ.

## ನರಸಿಂಹಪರ್ವತ

ಕಿಗ್ಗದಿಂದ ಸುಮಾರು ಮೂರು ಮೈಲಿ ದೂರದಲ್ಲಿ ಸಹ್ಯಾದ್ರಿಯ ಶ್ರೇಣಿಯಲ್ಲಿರುವ ಈ ಸ್ಥಳ ಸುಮಾರು ೨೮೦೦ ಅಡಿ ಎತ್ತರವಿದೆ. ಶ್ರೀ ಋಷ್ಯಶೃಂಗರೂ ಸೇರಿದಂತೆ, ಅನೇಕ ಪುರಾತನ ಋಷಿ, ಮುನಿಗಳ ತಪೋಭೂಮಿಯಾಗಿದ್ದ ರಮ್ಯವಾದ ಸ್ಥಳ. ಪರ್ವತದ ಮೇಲಿರುವ ಬಯಲು ಜಾಗದಲ್ಲಿ ಎರಡು ಚಿಕ್ಕಕೊಳಗಳಿವೆ. ಇವು ನಂದಿನಿ, ನಳಿನಿ, ಸೀತಾ, ಮಾಲತೀ ಮತ್ತು ಮಲಾಪಹಾ ಎಂಬ ಪಂಚನದಿಗಳ ಉಗಮಸ್ಥಾನ. ಈ ಕೊಳಗಳಿಂದ ಸ್ವಲ್ಪ ಮೇಲ್ಭಾಗಕ್ಕೆ ಹತ್ತಿಹೋದರೆ ಸುಮಾರು ಆರು ಅಡಿ ಎತ್ತರದ ಬಂಡೆಯೊಂದರಲ್ಲಿ ನಿಸರ್ಗ ನಿರ್ಮಿತವಾದ ಉಬ್ಬು, ತಗ್ಗುಗಳಿಂದ ರೂಪಿತವಾದ ಉಗ್ರನರಸಿಂಹ ಹಿರಣ್ಯಕಶಿಪುವಿನ ಒಡಲು ಬಗೆಯುತ್ತಿರುವಂತೆ ಕಾಣುತ್ತದೆ. ೩೨ನೇ ಆಚಾರ್ಯರಾದ ಶ್ರೀ ಶ್ರೀ ವೃದ್ಧನರಸಿಂಹ ಭಾರತಿಯವರು ಈ ಪರ್ವತಕ್ಕೆ ಬಂದು ಬಹು ಕಾಲ ತಪಸ್ಸು ಮಾಡುತ್ತಿದ್ದರು.

## ಕಿಗ್ಗ – ಶ್ರೀ ಋಷ್ಯಶೃಂಗೇಶ್ವರ

ಶೃಂಗೇರಿಯಿಂದ ಆರುಮೈಲಿ ದೂರದಲ್ಲಿ ಸಹ್ಯಾದ್ರಿಯ ತಪ್ಪಲಿನಲ್ಲಿರುವ

WWW.SRINGERI.NET

ಕಿಗ್ಗವು ಋಷ್ಯಶೃಂಗರ ತಪೋಭೂಮಿ. ಶೃಂಗೇರಿಯಿಂದ ಇಲ್ಲಿಗೆ ಬಸ್ಸಿನ ಸೌಕರ್ಯವಿದೆ. ತುಂಗೆಯ ಉಪನದಿಯಾದ ನಂದಿನಿಯು ಇಲ್ಲಿ ಪ್ರವಹಿಸುತ್ತಾಳೆ.

## ಯಾತ್ರಿಕರಿಗೆ ಸೌಕರ್ಯಗಳು

ನಾಡಿನ ಎಲ್ಲ ಪ್ರಮುಖ ಸ್ಥಳಗಳಿಂದಲೂ ಯಾತ್ರಿಕರು ಶೃಂಗೇರಿಗೆ ಬರುವುದಕ್ಕೆ ನೇರವಾದ ಬಸ್ಸಿನ ಸೌಕರ್ಯವಿದೆ.

ಶೃಂಗೇರಿಯಲ್ಲಿ ವಸತಿ ಸೌಕರ್ಯಕ್ಕೆ ಯಾರೂ ಕಷ್ಟಪಡಬೇಕಾಗಿಲ್ಲ. ಶ್ರೀ ಮಠದ ಮುಖ್ಯದ್ವಾರದ ಎಡಗಡೆ ಶ್ರೀ ಮಠಕ್ಕೆ ಹೊಂದಿಕೊಂಡಂತೆ ಶ್ರೀ ಶಂಕರ ನಿಕೇತನ, ಅದರ ಎದುರುಗಡೆ ಅತಿಥಿ ಗೃಹ; ಅಲ್ಲಿಂದ ಮುಂದಕ್ಕೆ ಹೋದರೆ ಬಸ್ ನಿಲ್ದಾಣದ ಸಮೀಪದಲ್ಲಿ ತಿರುಪತಿ ದೇವಸ್ಥಾನದ ಆಡಳಿತ ಮಂಡಳಿಯವರು ಕಟ್ಟಿಸಿ ಶ್ರೀ ಮಠದ ಆಡಳಿತದಲ್ಲಿರುವ ವಸತಿಗೃಹ; ಶ್ರೀ ಮಠದ ಮಹಾದ್ವಾರದ ಮುಂದಿನ ಭಾರತೀಬೀದಿಯಲ್ಲಿರುವ ಭಾರತೀ ವಿಹಾರ; ಶ್ರೀ ಮಠದ ಮುಖ್ಯದ್ವಾರದಿಂದ ಒಳಗೆ ಬಂದರೆ ಎಡಗಡೆ ಶ್ರೀ ಶಂಕರ ಕೃಪಾ-ಹೀಗೆ ಅನೇಕ ವಸತಿ ಗೃಹಗಳನ್ನು ಹಿಂದಿನ ಪೀಠಾಧೀಶ ಶ್ರೀ ಶ್ರೀ ಅಭಿನವ ವಿದ್ಯಾತೀರ್ಥರು ಯಾತ್ರಾರ್ಥಿಗಳ ಸೌಕರ್ಯಕ್ಕಾಗಿ ನಿರ್ಮಾಣ ಮಾಡಿಸಿರುತ್ತಾರೆ.

ಶ್ರಿ ಮಠಕ್ಕೆ ಪ್ರವೇಶಿಸುವ ಮಹಾದ್ವಾರದ ಹೊರಗೆ ಎಡಭಾಗದಲ್ಲಿ ಶ್ರೀ ಶಾರದಾ ಕೃಪಾ ಮತ್ತು ಅದರ ಎದುರಿಗೆ 'ಯಾತ್ರಿ ನಿವಾಸ' ಎಂಬ ಎರಡು ಸುಸಜ್ಜಿತ ಯಾತ್ರಿಕ ವಸತಿ ಸಂಕೀರ್ಣಗಳನ್ನು ಶ್ರೀ ಶ್ರೀ ಭಾರತೀ ತೀರ್ಥರು ನಿರ್ಮಾಣ ಮಾಡಿಸಿದ್ದಾರೆ. ಶ್ರೀ ಮಠದ ಮುಖ್ಯದ್ವಾರದ ಸಮೀಪದಲ್ಲಿಯೇ ಶ್ರೀ ಮಠದ ಪ್ರಕಟಣೆಗಳು-ಆಧ್ಯಾತ್ಮಿಕ ಗ್ರಂಥಗಳು ಮುಂತಾದವುಗಳ ಮಾರಾಟದ ಆಕರ್ಷಕ ಮಳಿಗೆ ಇದೆ.

ಶ್ರೀ ಮಠದ ಮುಂಭಾಗದ ರಥ ಬೀದಿಯ ಪ್ರಾರಂಭದಲ್ಲಿಯೇ ಬಲ ಪಕ್ಕದಲ್ಲಿ ಯಾತ್ರಿಕರ ವಸತಿಯ ಕಾಟೇಜುಗಳ ನಿರ್ಮಾಣ ಕಾರ್ಯ ಪ್ರಾರಂಭವಾಗಿದೆ.

ವಸತಿಗೃಹ ಸೌಕರ್ಯಕ್ಕಾಗಿ ಶ್ರೀ ಮಠದ ಮುಖ್ಯದ್ವಾರದ ಬಳಿ ಇರುವ ಸ್ವಾಗತಕಾರರನ್ನು ಸಂಪರ್ಕಿಸಿ, ಸೌಕರ್ಯವನ್ನು ಪಡೆಯಬಹುದು. ಶೃಂಗೇರಿಗೆ ಬರುವ ಎಲ್ಲ ಯಾತ್ರಿಕರಿಗೂ ಶ್ರೀ ಮಠದಲ್ಲಿ ಅನ್ನದಾನದ ವ್ಯವಸ್ಥೆಯನ್ನು ಸುಸಜ್ಜಿತವಾಗಿ ನಿರ್ಮಿಸಿದ ಭೋಜನಾಲಯದಲ್ಲಿ ಮಾಡಲಾಗುತ್ತಿದೆ.

## ಆಕರ್ಷಕ ಭವ್ಯ ಭೋಜನ ಶಾಲೆ

ಶ್ರೀ ಮಠಕ್ಕೆ ಪ್ರತಿ ದಿನವೂ ರಾಷ್ಟ್ರದ ವಿವಿಧ ಭಾಗಗಳಿಂದ ಬರುವ ಸಹಸ್ರಾರು ಸಂಖ್ಯೆ ಭಕ್ತರಿಗೆ ಶುಚಿ-ರುಚಿಯಾದ ಪ್ರಸಾದ ಭೋಜನವನ್ನು ವ್ಯವಸ್ಥಿತ ರೀತಿಯಲ್ಲಿ ನೀಡಲು ಅತ್ಯಂತ ಆಕರ್ಷಕ ವಿನ್ಯಾಸದ ಭವ್ಯ ಭೋಜನ ಶಾಲೆಯು ಈಚೆಗೆ ಉದ್ಘಾಟಿಸಲ್ಪಟ್ಟಿದೆ. ಒಂದೇ ಸಲಕ್ಕೆ ೩ ಸಹಸ್ರ ಮಂದಿ ಕುಳಿತು ಊಟಮಾಡಲು ಅವಕಾಶವಿರುವ-೩೧/೨ ಕೋಟಿ ರೂ.ಗಳ ವೆಚ್ಚದ ಅತ್ಯಾಧುನಿಕ ತಾಂತ್ರಿಕ ನಿರ್ಮಾಣ ವಿಧಾನದಿಂದ ರೂಪುಗೊಂಡಿರುವ ಈ ಬೃಹತ್ ಕಟ್ಟಡವು ಇಡೀ ರಾಷ್ಟ್ರದಲ್ಲಿಯೇ ವಿಶಿಷ್ಟವಾದುದು. ಸುತ್ತಮುತ್ತಲಿನ ಶಾಲಾ ಕಾಲೇಜುಗಳಿಗೆ ಮಧ್ಯಾಹ್ನದ ಊಟವನ್ನು ಉಚಿತವಾಗಿ ಕಳುಹಿಸಿಕೊಡಲಾಗುತ್ತದೆ.

ಶ್ರೀ ಶಾರದಾಂಬಾ, ಶ್ರೀ ವಿದ್ಯಾಶಂಕರ ಮತ್ತು ಇತರ ದೇವಾಲಯಗಳು ಬೆಳಿಗ್ಗೆ ೬ ರಿಂದ ೧ ಘಂಟೆಯವರೆಗೆ ಮತ್ತು ಸಾಯಂಕಾಲ ೫ರಿಂದ ೯ಘಂಟೆಯವರೆಗೆ ತೆರೆದಿರುತ್ತವೆ. ಭಕ್ತಾದಿಗಳು ಅಭಿಷೇಕ, ಅರ್ಚನಾದಿಗಳನ್ನು ಆ ಸಮಯದಲ್ಲಿ ಮಾಡಿಸಬಹುದು.

WWW.SRINGERI.NET

ವಿಶೇಷ ಪೂಜಾದಿಗಳನ್ನು ಮಾಡಿಸಲು ಅಪೇಕ್ಷಿಸುವವರು, ಅಂದರೆ, ಶ್ರೀ ಶಾರದಮ್ಮನವರಿಗೆ ದಿಂಡಿ ದೀಪಾರಾಧನೆ, ಲಕ್ಷಾರ್ಚನೆ, ಸುವಾಸಿನೀ ಪೂಜೆ, ಗಣಪತಿಗೆ ಮೋದಕ ಸೇವೆ, ಮಕ್ಕಳಿಗೆ ಅಕ್ಷರಾಭ್ಯಾಸ, ಮುಂತಾದುವನ್ನು ಮಾಡಿಸಲು ಅಪೇಕ್ಷಿಸುವ ಭಕ್ತಾದಿಗಳು ಮುಂಚಿತವಾಗಿ ಶ್ರೀ ಮಠದ ಆಡಳಿತಾಧಿಕಾರಿಗಳಿಗೆ ಪತ್ರ ಬರೆದರೆ, ಆ ಸೇವೆಗಳನ್ನು ಮಾಡಿಸಲು ವ್ಯವಸ್ಥೆ ಮಾಡಲಾಗುವುದು.

ವರ್ಷಕ್ಕೊಂದು ಬಾರಿ ಶ್ರೀ ಶಂಕರ ಜಯಂತಿಯ ಸಂದರ್ಭದಲ್ಲಿ ಶ್ರೀಮಠದ ವತಿಯಿಂದ ಧರ್ಮೋಪನಯನವನ್ನು ಏರ್ಪಾಡು ಮಾಡಲಾಗುತ್ತದೆ. ಈ ಸಂದರ್ಭವನ್ನು ಉಪಯೋಗಿಸಿಕೊಳ್ಳಲು ಅಪೇಕ್ಷಿಸುವವರು ಶ್ರೀ ಮಠದ ಆಡಳಿತಾಧಿಕಾರಿಗಳನ್ನು ಸಂಪರ್ಕಿಸಬೇಕು.

ಇದಲ್ಲದೇ ಚಂಡೀಹೋಮ, ರುದ್ರಹೋಮವೇ ಮೊದಲಾದ ಹೋಮ - ಹವನಗಳನ್ನು ಮಾಡಲು ಇಚ್ಛಿಸುವವರು ಮುಂಚಿತವಾಗಿ ಶ್ರೀ ಮಠಕ್ಕೆ ಬರೆದರೆ, ವ್ಯವಸ್ಥೆ ಮಾಡಲಾಗುವುದು.

ಭಕ್ತಾದಿಗಳು ತಮ್ಮ ಹರಕೆ ಮತ್ತು ಕಾಣಿಕೆಗಳನ್ನು ಸಲ್ಲಿಸಲೂ ಸಹ ಉಚಿತವಾದ ವ್ಯವಸ್ಥೆ ಇದೆ.

## ವಿದ್ಯಾತೀರ್ಥ ಸೇತು

ಮಳೆಗಾಲದಲ್ಲಿ ತುಂಗೆಯು ತುಂಬಿ ಹರಿಯುವಾಗ ನರಸಿಂಹವನಕ್ಕೆ ಹೋಗಲು ದೋಣಿ-ಜಂಗಲ್‌ಗಳ ಬಳಕೆ ಅನಿವಾರ್ಯವಾಗಿತ್ತು. ಪ್ರವಾಹ ಹೆಚ್ಚಿದಾಗ ಅದೂ ಸಾಧ್ಯವಾಗದೆ ತೊಂದರೆಯಾಗುತ್ತಿತ್ತು. ಮಳೆಗಾಲ ಕಳೆದ ನಂತರವೂ ಮರದಹಂಗಾಮಿ ಸಾರುವೆ ಹಾಕಿ ಅದರ ಮೇಲೆ ಓಡಾಡಬೇಕಾಗುತ್ತಿತ್ತು. ಈ ಎಲ್ಲ ತೊಂದರೆಗಳನ್ನು ತಪ್ಪಿಸುವ

WWW.SRINGERI.NET

ಸಲುವಾಗಿ ಬ್ರಹ್ಮೈಕ್ಯ ಗುರುವರ್ಯ ಶ್ರೀ ಶ್ರೀ ಅಭಿನವ ವಿದ್ಯಾತೀರ್ಥರು ಶಾಶ್ವತ ಸೇತುವೆಯ ನಿರ್ಮಾಣ ಕಾರ್ಯವನ್ನು ಪ್ರಾರಂಭ ಮಾಡಿಸಿದರು. ಲಕ್ಷಾಂತರ ರೂಪಾಯಿಗಳ ಖರ್ಚಿನ ಈ ಅಗಾಧ ಕೆಲಸವು ನವೀನ ತಾಂತ್ರಿಕ ನಿಪುಣರ ಮೇಲ್ವಿಚಾರಣೆಯಲ್ಲಿ ಮುಂದುವರಿಯಿತು. ಆದರೆ ನಿರ್ಮಾಣ ಕಾರ್ಯ ಮುಗಿಯುತ್ತ ಬರುತ್ತಿದೆ ಎನ್ನುವಾಗಲೇ ಶ್ರೀ ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳವರು ಬ್ರಹ್ಮೈಕ್ಯರಾದರು. ನಂತರ ಭದ್ರವೂ-ಭವ್ಯವೂ ಆದ ಈ ಸೇತುವೆಗೆ ಅವರ ಶಿಷ್ಯ ಗುರುವರ್ಯ ಶ್ರೀ ಶ್ರೀ ಭಾರತೀ ತೀರ್ಥರು ವಿದ್ಯಾತೀರ್ಥ ಸೇತು ಎಂಬ ಅರ್ಥ ಪೂರ್ಣ ಹೆಸರನ್ನಿಟ್ಟು ೧೯೯೦ರಲ್ಲಿ ಉದ್ಘಾಟಿಸಿ ಗುರು ಭಕ್ತಿಯನ್ನು ಸಮರ್ಪಿಸಿದರು.

## ಸಂಸ್ಕೃತ ಪಾಠಶಾಲೆಯ ಹೊಸ ಕಟ್ಟಡ

೧೯೯೫ರಲ್ಲಿ ಶ್ರೀ ಜಗದ್ಗುರು ಸಂಸ್ಥಾನದ ಶ್ರೀ ಸದ್ವಿದ್ಯಾ ಸಂಜೀವಿನೀ ಸಂಸ್ಕೃತ ಮಹಾಪಾಠಶಾಲೆಯ ಶತಮಾನವನ್ನು ಪೂರೈಸಿದ ಸವಿ ನೆನವಿಗಾಗಿ ಪ್ರಾಚೀನ ಗುರುಕುಲದ ಮಾದರಿಯಲ್ಲಿ ನವೀನ ನಿರ್ಮಾಣ ತಂತ್ರದಿಂದ ೨೫ ಲಕ್ಷ ರೂ.ಗಳ ವೆಚ್ಚದಲ್ಲಿ ಹೊಸ ಪಾಠಶಾಲಾ ಸಂಕೀರ್ಣವನ್ನು ನಿರ್ಮಿಸಲಾಗಿದೆ. ಕಾಲಭೈರವನ ಗುಡ್ಡದ ನೆತ್ತಿಯಲ್ಲಿ ನಿಸರ್ಗರಮ್ಯ-ಶಾಂತ ಪರಿಸರದಲ್ಲಿ ಈ ವಿದ್ಯಾನಿಲಯವು ನಿಜವಾಗಿಯೂ ವೇದ ಕಾಲೀನ ಪರಿಸ್ಥಿತಿಯನ್ನು ಪ್ರತಿಬಿಂಬಿಸುತ್ತದೆ.

## ಶಂಕರ ಅದ್ವೈತ ಸಂಶೋಧನ ಕೇಂದ್ರ

ಪಾಠಶಾಲೆಯ ಹೊಸ ಸಂಕೀರ್ಣದ ಸಮೀಪದಲ್ಲಿ ಶ್ರೀ ಶ್ರೀ ಭಾರತೀ ತೀರ್ಥರಿಂದ ಶಿಲಾನ್ಯಾಸಗೊಂಡಂತಹ ಶಂಕರ ಅದ್ವೈತ ಸಂಶೋಧನ ಕೇಂದ್ರವೆಂಬ ಕಟ್ಟಡ ನಿರ್ಮಾಣವಾಗಿದೆ. ಆಧುನಿಕ

WWW.SRINGERI.NET

ತಂತ್ರಜ್ಞಾನ ಹೊಂದಿದ ಈ ಕೇಂದ್ರವು ಹಲವು ಧಾರ್ಮಿಕ, ಆಧ್ಯಾತ್ಮಿಕ ಕಾರ್ಯಕ್ರಮಗಳನ್ನು ನಡೆಸುತ್ತಾ, ಹಲವು ತಾತ್ವಿಕ ಪ್ರಕಟಣೆಗಳನ್ನು ಹೊರತರುವ ಕಾರ್ಯದಲ್ಲಿ ನಿರತವಾಗಿದೆ.

## ಶ್ರೀ ಶಾರದಾಂಬೆಗೆ ಚಿನ್ನದ ರಥ ಸಮರ್ಪಣೆ

ಶ್ರೀ ಶಾರದಾ ದೇವಾಲಯದ ಒಳ ಆವರಣದಲ್ಲಿ ಪ್ರತಿ ಶುಕ್ರವಾರ ಮತ್ತು ವಿಶೇಷಸಂದರ್ಭಗಳಲ್ಲಿ ನಡೆಯುವ ದಂಡೀ ದೀಪಾರಾಧನೆಯ ಉತ್ಸವಕ್ಕೆ ಇದು ಮೊದಲು ಉಪಯೋಗವಾಗುತ್ತಿದ್ದ ಬೆಳ್ಳಿಯ ಚಿಕ್ಕ ರಥಕ್ಕೆ ಬದಲಾಗಿ ಒಂದು ಕೋಟಿ ರೂಪಾಯಿ ವೆಚ್ಚದ ಕಣ್ಮನ ಸೆಳೆಯುವ ಕುಸುರಿ ಕೆಲಸದಿಂದ ರಂಜಿತವಾದ ಚಿನ್ನದ ರಥವನ್ನು ಶ್ರೀ ಶ್ರೀ ಗುರುವರ್ಯರ ಸಂನ್ಯಾಸ ಸ್ವೀಕಾರದ ರಜತ ಮಹೋತ್ಸವದ ನೆನಪಿನಲ್ಲಿ ಶ್ರೀ ಶಾರದಾಂಬೆಗೆ ಸಮರ್ಪಿಸಲಾಗಿದೆ.

## ಉಪಸಂಹಾರ

ಇಂತಹ ಪವಿತ್ರ ಕ್ಷೇತ್ರವಾದ ಶೃಂಗೇರಿಯ ಶ್ರೀ ಶಾರದೆಯು ಸಕಲ ವಿದ್ಯೆಗಳ ಅಧಿಷ್ಠಾತ್ರಿ. ಆಚಾರ್ಯ ಶ್ರೀ ಶಂಕರರು ಜಗತ್ತಿಗೇ ಔಪನಿಷದ ದಿವ್ಯತತ್ತ್ವಪ್ರಕಾಶ ನೀಡಿ ಜಗದ್ಗುರುಗಳೆನಿಸಿದರು. ಆದ್ದರಿಂದಲೇ ಶೃಂಗೇರಿಯ ಒಂದು ವಿಶಿಷ್ಟ ಕ್ಷೇತ್ರವೆನಿಸಿ ಧಾರ್ಮಿಕ ಜಿಜ್ಞಾಸು, ಸಂಪ್ರದಾಯನಿಷ್ಠ, ನಿಸರ್ಗಪ್ರೇಮಿ, ಕಲಾವಿದ, ಶಿಲ್ಪಶಾಸ್ತ್ರ ಕುತೂಹಲಿ. ಇತಿಹಾಸ-ಪುರಾತತ್ತ್ವ ಸಂಶೋಧಕ, ಭಕ್ತ, ಮುಂತಾದ ಎಲ್ಲ ಜನರನ್ನೂ ತನ್ನೆಡೆಗೆ ಆಕರ್ಷಿಸಿ, ಅವರ ಮನಶ್ಶಾಂತಿಗೆ ಅನುಕೂಲವುಂಟುಮಾಡುವ ಪವಿತ್ರ ಕ್ಷೇತ್ರವಾಗಿದೆ.

WWW.SRINGERI.NET

# ಶಂಕರರು ಪ್ರತಿಪಾದಿಸಿದ ಸಿದ್ಧಾಂತ ; ಅದ್ವೈತ ಸಿದ್ಧಾಂತ

ಈ ಜಗತ್ತಿನಲ್ಲಿ ಪ್ರತಿಯೊಬ್ಬ ಜೀವನು ವಾಸ್ತವವಾಗಿ ನಿತ್ಯಶುದ್ಧ ಸಚ್ಚಿದಾನಂದರೂಪವಾದ ಪರಬ್ರಹ್ಮಸ್ವರೂಪಿಯಾಗಿದ್ದಾನೆ. ಅದನ್ನು ಚೆನ್ನಾಗಿ ತಿಳಿದುಕೊಂಡವನು ಸಂಸಾರದುಃಖಗಳಿಂದ ಮುಕ್ತನಾಗುತ್ತಾನೆ. ಸಂಸಾರವೆಂಬುದು ತ್ರಿಗುಣಾತ್ಮಕವಾದ ಅವಿದ್ಯೆಯ ವಿಕಾರವಾಗಿದೆ. ಈ ಪ್ರಪಂಚವು ಅವಿದ್ಯೆಯು ಇರುವವರೆಗೆ ಇರುತ್ತದೆ. ಬ್ರಹ್ಮಜ್ಞಾನವು ಬಂದನಂತರ ಅವಿದ್ಯೆಯು ನಾಶವಾಗುತ್ತದೆ. ಈ ಅವಿದ್ಯೆಯು ಮಾಯಾ, ಅಜ್ಞಾನ, ಪ್ರಕೃತಿ ಮುಂತಾದ ಶಬ್ದಗಳಿಂದಲೂ ಹೇಳಲ್ಪಡುತ್ತದೆ. ನಿರಂತರ ನಿಷ್ಕಾಮವಾದ ದೇವರ ಆರಾಧನೆ ಮತ್ತು ಸ್ವಧರ್ಮಾಚರಣೆಯಿಂದ ಚಿತ್ತಶುದ್ಧಿಯನ್ನು ಹೊಂದಿದ ನಂತರ ಜೀವನು ಬ್ರಹ್ಮವಿಚಾರ ಮಾಡಲು ಯೋಗ್ಯತೆಯನ್ನು ಹೊಂದುತ್ತಾನೆ. ತದಂತರ ಗುರುಮುಖತಃ ಶ್ರವಣ ಮನನ ನಿದಿಧ್ಯಾಸನಗಳನ್ನು ಮಾಡಿ ಅದ್ವೈತತತ್ತ್ವನ್ನು ತಿಳಿದು ಅಜ್ಞಾನ ಪ್ರಯುಕ್ತವಾದ ಸಂಸಾರದಿಂದ ಮುಕ್ತಿಯನ್ನು ಹೊಂದುತ್ತಾನೆ.

# ಜಗದ್ಗುರು ಶ್ರೀಶಂಕರಾಚಾರ್ಯರು ತೋರಿಸಿದ ಪವಾಡಗಳು

1. ಮಹಾಲಕ್ಷ್ಮಿಯನ್ನು ಸ್ತುತಿಸಿ ಬಡ ಗೃಹಿಣಿಯ ಮನೆಯಲ್ಲಿ ಚಿನ್ನದ ಮಳೆಯನ್ನು ಸುರಿಸಿದರು.
2. ವಯಸ್ಸಾದ ತಮ್ಮ ತಾಯಿಯ ಸೌಕರ್ಯಕ್ಕಾಗಿ ಪೂರ್ಣಾನದಿಯ

WWW.SRINGERI.NET

ಪಾತ್ರವನ್ನೇ ಬದಲಾಯಿಸಿ ತಮ್ಮ ಮನೆಯ ಮುಂದೆಯೇ ಪ್ರವಹಿಸುವಂತೆ ಮಾಡಿದರು.

3. ಮಳೆಗಾಲದಲ್ಲಿ ನರ್ಮದಾನದಿಯು ಉಕ್ಕಿ ಹರಿದು ಎಲ್ಲ ಊರುಗಳು ಕೊಚ್ಚಿಹೋಗುತ್ತಾ ಇರುವಾಗ ಇಡೀ ಪ್ರವಾಹದ ನೀರನ್ನು ತಮ್ಮ ಕಮಂಡಲುವಿನಲ್ಲಿ ಅಡಗಿಸಿದರು.

4. ಬದರಿನಾಥಕ್ಷೇತ್ರದಲ್ಲಿ ದುಷ್ಕರ್ಮಿಗಳು ದೇವರ ವಿಗ್ರಹವನ್ನು ನಾರದ ತೀರ್ಥದಲ್ಲಿ ಬಿಸಾಡಿದಾಗ ಅದರಲ್ಲಿಳಿದು ವಿಗ್ರಹವನ್ನು ಹುಡಿಕಿ ತಂದು ಪುನಃ ಪ್ರತಿಷ್ಠಾಪನೆ ಮಾಡಿದರು.

5. ತಿರುಪತಿಯ ತಿಮ್ಮಪ್ಪನ ಸನ್ನಿಧಿಯಲ್ಲಿ ಧನಾಕರ್ಷಣ ಯಂತ್ರವನ್ನು ಸ್ಥಾಪನೆ ಮಾಡಿದರು.

6. ಶೃಂಗೇರಿ ಕ್ಷೇತ್ರದಲ್ಲಿ ಗಿರಿಯೆಂಬ ವಿದ್ಯಾರ್ಥಿಗೆ ತಮ್ಮ ಮನಸ್ಸಂಕಲ್ಪದಿಂದಲೇ ಎಲ್ಲ ವಿದ್ಯೆಗಳನ್ನು ಅನುಗ್ರಹಿಸಿದರು.

7. ತಮ್ಮ ತಾಯಿಯವರಿಗೆ ಅಂತ್ಯಕಾಲದಲ್ಲಿ ಮುಕ್ತಿಯನ್ನು ಕರುಣಿಸಿದರು.

8. ಬದರೀನಾಥಕ್ಷೇತ್ರದಲ್ಲಿ ಚಳಿಯಿಂದ ನರಳುತ್ತಿರುವ ಜನರಿಗಾಗಿ ಬಿಸಿನೀರಿನ ಕುಂಡವನ್ನು ಸೃಷ್ಟಿಸಿದರು.

9. ಜಗನ್ನಾಥ ಕ್ಷೇತ್ರವಾದ ಪುರಿಯಲ್ಲಿ ವಿಧರ್ಮಿಯರ ಆಕ್ರಮಣದಿಂದ ದೇವತಾ ಮೂರ್ತಿಗಳ ನಾಶವನ್ನು ತಡೆಯಲು ಭೂಮಿಯೊಳಗೆ ಇಡಲ್ಪಟ್ಟ ವಿಗ್ರಹಗಳು ಶಿಥಿಲವಾಗಿರುವುದನ್ನು ಕಂಡು ನೂತನ ವಿಗ್ರಹಗಳನ್ನು ಪುನಃ ಪ್ರತಿಷ್ಠಾಪನೆ ಮಾಡಿ, ನೇಪಾಳದಿಂದ ಸಾಲಗ್ರಮಗಳನ್ನು ತರಿಸಿ ಪೂಜಾವಿಧಾನಗಳನ್ನು ಏರ್ಪಡಿಸಿದರು.

10. ಮೃತನಾದ ಬಾಲಕನನ್ನು ಬದುಕಿಸಿದರು.

WWW.SRINGERI.NET

# ಜಗದ್ಗುರು ಶ್ರೀಶಂಕರಭಗವತ್ಪಾದರ ಉಪದೇಶಗಳು

## (ಪ್ರತಿನಿತ್ಯ ಓದಬೇಕಾದದ್ದು)

ಶಂಕರಂ ಶಂಕರಾಚಾರ್ಯಂ ಕಿಂಕರಂ ಬ್ರಹ್ಮವೇದಸಾಮ್ |
ಭೀಕರಂ ಭೇದವಾದಾನಾಂ ಪ್ರಣತೋಽಸ್ಮಿ ಮಹಸ್ಕರಮ್ ||

ವಾಚಃ ಪ್ರಸನ್ನಗಂಭೀರಾ ಬ್ರಹ್ಮಾದ್ವೈತ ಪ್ರಭಾಂಕಿತಾಃ |
ಪ್ರಪನ್ನಮಾರ್ಗದರ್ಶಿನ್ಯೋ ಯಸ್ಯಾಮೃತಮುಚೋ ಮತಾಃ ||

ತಸ್ಯೋಪದೇಶರತ್ನಾನಿ ಪ್ರಾಸರಾಶಿವಿನೂತನೇ |
ಕರ್ನಾಟಕಕವಾಟೇಽಸ್ಮಿನ್ ನ್ಯಸ್ಯಾಮಿ ಶ್ರೀಗುರುಶ್ರಿತಃ ||

ಬ್ರಹ್ಮವೊಂದೆ ಸತ್ಯ,
ಜಗವಿದೆಲ್ಲ ಮಿಥ್ಯ.
ಜೀವನಿವನು ಬ್ರಹ್ಮವೆ -
ಬೇರೆಯಿಲ್ಲ ಭಾವವೆ.

ಮೃಡನ ಮಾಯೆಯಿಂದಲವನೆ ಜೀವನು.
ಪಡೆದ ಅರಿವಿನಿಂದಲಿವನೆ ದೇವನು.

ಬದ್ಧಮಾಯೆ ಕನಸಿನಂತೆ ಸುಳಿಯೆ ಜಗವದು.
ಶುದ್ಧಚಿತ್ತದೊಳಗೆ ತಾನು ತೊಳಗೆ ಸೊಬಗದು.

ಮರೆತ ಜೀವ ಮುಗ್ಧನಂತೆ ಜಗದಿ ಬದ್ಧನು.
ಅರಿತ ಯೋಗಿ ಮುಕ್ತನಾಗಿ ಜಸಕೆ ಸಿದ್ಧನು.

WWW.SRINGERI.NET

ಜೀವ ಜೀವನಲ್ಲ, ಶುದ್ಧ ಬುದ್ಧ ಮುಕ್ತನು,
ದೇವನಂತೆ ಸಿದ್ಧ ಸದಾನಂದರೂಪನು.

ಶ್ರವಣ, ಮನನ, ಧ್ಯಾನ, ಕಾಣ್ಕೆ, ತನಗೆ ತನ್ನದು,
ಭ್ರಮಣವಳಿದು ಬೆಳಕು ಬೆಳಗೆ 'ತಾನು' ನಲಿವುದು.

ಗುರುವು ದಾರಿ ಗುರುವೆ ದಾರಿ ಗುರುವೆ ಗುರಿಯಲಾ.
ಗರಲ ಮೆಟ್ಟಿ ಗುರಿಯ ಮುಟ್ಟಿ ಗರಿಮೆ ಮೆರೆಯಲಾ.

೧ ಅನ್ಯರನು ನೋಡು ತನ್ನ ರೀತಿ,
ಮಾನ್ಯದಲಿ ಮಾಡು ನಿನ್ನ ಪ್ರೀತಿ.

೨ ಕಂಗಳಿಲ್ಲದವನು ಕುರುಡನೇ?
ಕಂಡರಿತು ತಪ್ಪಿದವನು ಕುರುಡನೇ.

೩ ಜೊತೆಗಾರ ಗೆಳೆಯನಲ್ಲ ಎಂದಿಗೂ,
ಕೇಡಕಳೆವ ಮತಿಗಾರ ಗೆಳೆಯ ಇಂದಿಗೂ.

೪ ಮಾತು ಬಾರದವ ಮೂಕನಲ್ಲ; ಹೊತ್ತಿನಲಿ
ಮಾತಾಡದವ ಮೂಕನೇ.

೫ ಅಕ್ಕರೆಯ ನುಡಿವೆರಸಿ ದಾನವನು ನೀಡು
ಮಿಕ್ಕಿರಲು ಬಲ ಕನಿಕರದಿ ಸಹಿಸು... ನೋಡು
ಇಕ್ಕಲುಪಕಾರವನು ಸಂಗ್ರಹಿಸು ಪರಿಕರವ.

೬ ಅನುಭವಿಗಳನುಸರಿಸಿ ಜೀವನವ ಹೊಂದಿಸೆ,
ಅನುವಿಲ್ಲದೋಡುವವು ಕಷ್ಟಗಳು ಮುಂದೆಸೆ.

WWW.SRINGERI.NET

೭ ಉತ್ಸಾಹದಿಂದ ಕಾರ್ಯಗಳನೆಸಗಿದರೆ

ಉತ್ಸವವೆ ಸಂಪದಗಳಿಗಹುದು.

೮ ಪದುಮದಿಂ ತೊಳಗುತಿಹ ತೀರ್ಥ

ಹೃದಯವನು ತೊಳೆದರದು ಸಾರ್ಥ.

೯ ನಿಪುಣನಿಗೆ ಹಣವುಸಿರು,

ಜಿಪುಣತನಕಿಲ್ಲ ಹೆಸರು.

೧೦ ಬಯಕೆಗಳ ಗೆದ್ದವನು

ಭಯದಿಂದಲೆದ್ದವನು.

೧೧ ವಿನಯಶಾಲಿ ಹೊಂದುವನಭ್ಯುದಯವ.

೧೨ ಬಿತ್ತಿದವನೆ ಬೆಳೆಯುವವನು.

೧೩ ಕಷ್ಟದಿಂದೆತ್ತುವವನೆ ಶೂರ.

೧೪ ಕ್ರೋಧವನು ಗೆದ್ದರೆ ಮರುಕಕೆಡೆಯಿಲ್ಲ.

೧೫ ತಾಯಿತಂದೆಯವರು ಕಣ್ಣಮುಂದಿನ ದೇವರು.

೧೬ ಸಂತರನು ವಂಚಿಸಿದವ ನಿರ್ಮೂಲನಷ್ಟ.

೧೭ ದುಷ್ಟರ ಮೈತ್ರಿ ಬೇಗ; ಅದರ ನಾಶಕಿನ್ನಷ್ಟು ವೇಗ.

೧೮ ಪ್ರತಿಫಲ ಬಯಸದಿದ್ದರದು ನಿಜವಾದ ದಾನ.

೧೯ ಸಾಧು ಶಿಷ್ಯಂಗೆ ಕರುಣಿಸಿದ ವಿದ್ಯೆ ಕಲ್ಪವೃಕ್ಷವಲಾ !

೨೦ ರಕ್ತಮಾಂಸಲ ದೇಹ; ಹೆಣ್ಣೆಂಬ ಮೋಹ;

ಅದಕವದಿರು ಜೀವ.

WWW.SRINGERI.NET

೨೧ ಜ್ಞಾನವೃದ್ಧರಿಲ್ಲದ ಸಭೆಯು ತ್ಯಾಜ್ಯ.

೨೨ ಸೋಮಾರಿ ತನಗೆ ತಾನೆ ವೈರಿ.

೨೩ ದುರಾಶೆ ಪೀಡಿತನೆ ಕುರುಡ.

೨೪ ಕೈಚಾಚದವನ ಬಾಳು ಒಳಿತು.

೨೫ ತೃಪ್ತಿಯಿಲ್ಲದ ಮನುಜ ಸತತ ದುಃಖಿ.

೨೬ ಪರಹಿತವ ಬಯಸುವವನು ಎಲ್ಲರಿಗೆ ಪ್ರಿಯನು.

೨೭ ಧರ್ಮವನು ಉಳಿಸಲು ಸುಳ್ಳೊಂದು ಹೇಳಿದರೆ ತಪ್ಪಲ್ಲ.

೨೮ ವಿಷ ಹಾವೊಳಗಿಲ್ಲ; ಕೇಡುಗನ ಹೃದಯದೊಳುಂಟು.

೨೯ ಪರಪೀಡೆಗೈಯದವನು ಪರಮಾತ್ಮಂಗೆ ಪ್ರಿಯನು.

೩೦ ಪತಿಗೆ ಸತಿ ಸರಿಸಂಗಾತಿ.

೩೧ ಕರ್ತವ್ಯವನು ಮರೆತವನು ಸತ್ತವಗೆ ಸಮನು.

೩೨ ಸಜ್ಜನರ ಹಿಂಸಿಸುವಗೆ ಸರ್ವನಾಶವೆ ನಿಶ್ಚಿತ.

೩೩ ನೀಚರನು ಸೇರ್ದವನು ನಾಯಿಗಿಂತಲು ಹೀನ.

೩೪ ಸರಿಸಮಯದಲಿತ್ತ ವಸ್ತು ಬಹುಮೂಲ್ಯ.

೩೫ ಶುದ್ಧಮನದವನು ಪರಿಶುದ್ಧ.

೩೬ ಬೇವು ಬಿತ್ತಿ ಮಾವು ಬೆಳೆಯ ಬಯಸಬಾರದು.
ಜೀವಜಲವು ಮರವ ಬೆಳೆಸೆ ಬೈಯ್ಯಬಾರದು.
ಕೆಡುಕು ಮಾಡಿ ಹುಡುಕೆ ಶುಭವ ಬುದ್ಧಿ ಬಪ್ಪುದೆ?
ಒಡನೆ ದೈವನಿಂದೆ ಮಾಡೆ ಪಡೆಯಲಪ್ಪುದೆ?

WWW.SRINGERI.NET

೩೭ ತರ್ಕದಲಿ ಹೊತ್ತುಗಳೆಯದೆ ನೋಡು.

ತಿಳಿದಳೆದು ಕಾರ್ಯಗಳ ನೀ ಮಾಡು.

೩೮ ಸಮಯದಲಿ ಕಾರ್ಯವನು ಎಸಗು.

೩೯ ಪ್ರಾಜ್ಞಗುರು; ಅಜ್ಞರನು ಪ್ರಾಜ್ಞರಾಗಿಸುವ ತಜ್ಞ

ಗುರು; ಪರಮಾರ್ಥವನು ತಲುಪಿಸುವ ತತ್ತ್ವಜ್ಞಗುರು.

೪೦ ನನ್ನೊಳಗಿನಹಂಕಾರವನು ಮಾಗಿಸು,

ಮನವ ಶೋಧಿಸಿ ದುರಾಸೆಗಳ ನೀಗಿಸು,

ದಯೆಯ ಹೊಮ್ಮಿಸಿ ಸಂಸಾರಶರಧಿಯ ದಾಟಿಸು...

ಇಂತು ಪರಿಪರಿಯಿಂದ ಪ್ರಾರ್ಥಿಸಲು

ಸರ್ವವನು ಶರ್ವನಲಿ ಯಾಚಿಸದಂತೆ ಕಣಾ!

೪೧ ವಿದ್ಯೆಯಧ್ಯಯನದಲಿ ಔಷಧಸತ್ಪಾತ್ರದಾನಗಳಲಿ

ಸತತಾಸಕ್ತನಾಗಿರು ಸಜ್ಜನ...!

೪೨ ಪರಬ್ರಹ್ಮವನು ತಿಳಿವವನೇ ಸಂಸಾರದಿಂ
ಹೊರಹೊರಟವನು.

೪೩ ಮರಣವದಾರಿಗೆ ಬರದಲ್ತು!

೪೪ ಜಗದ ಕಣಕಣದೊಳಗೆ ಕಷ್ಟಗಳಮರಿಕೊಂಡಿವೆ-ದಿಟ.

೪೫ ಅನರ್ಘವೀ ಸಮಯ; ವ್ಯರ್ಥ ಕಳೆಯದಿರು.

೪೬ ವ್ಯರ್ಥ ಮಾತಾಡದಿರು.

೪೭ ನಿತ್ಯ ಗೀತೆಯ ಪಠಿಸು.

WWW.SRINGERI.NET

೪೮ ನೆನೆ ನೆನೆ ಪರಮಾತ್ಮನ.

೪೯ ಸಜ್ಜನರ ಸಂಗವನು ಮಾಡು.

೫೦ ದುರ್ಗತರ ಪೊರೆ.

೫೧ ಪಡೆದ ಫಲಕೆ ಸಂತಸವ ಪಡು; ಅನ್ಯಫಲಗಳಾಸೆ ಬಿಡು.

೫೨ ಕಾಮಾದಿ ದುರ್ಗುಣಂಗಳ ಬಿಡು.

೫೩ ಗೋಮಾತೆಯನ್ನು ಪೂಜಿಸು.

೫೪ ಅಹಂಕಾರವನು ತೊಡೆಯೆ; ಸಂಯಮವ ಪಡೆಯೆ;
ದುರಾಸೆಯ ಕಡೆಯೆ; ಪರಶಿವನ ಪ್ರೀತಿಯನು ಮುಡಿಯೆ
ಸಂಸಾರ ಕಡಲ ದಾಟೆ ಯಾಚಿಸು ದೈವವನು;
ಬೇರೆ ಯೋಚಿಸಲೇನು?

೫೫ ತತ್ತ್ವವನು ತಿಳಿದವನೆ ಸಂಸಾರವನು ದಾಟುವನು.

೫೬ ಋಷಿಮುನಿಗಳ ಸತ್ಸಂಪ್ರದಾಯವನುಳಿದು ಸ್ವಚ್ಛಂದದಿಂ
ವರ್ತಿಸುವವನು ಎನಿತಾದರುಮಲ್ಪನೇ!

೫೭ ಅಗ್ನಿ ಸನ್ನಿಹಿತಂಗೆ ಕಾವಿಟ್ಟು ಹಿತವನಿಟ್ಟಂತೆ
ದೈವ ಭಕ್ತರ್ಗೆ ಹಿತವುಣಿಸದಿರ್ಕುಮೆ?

೫೮ ಗುರುಪಾದಪದ್ಮಂಗಳಲಿ ಅಚಲವಿಶ್ವಾಸವನಿಡು.
ಸಂಸಾರಸಾಗರವ ಬಿಡು. ನಡೆ ಮುಕ್ತಿಮಾರ್ಗದಲಿ.

(ಪ್ರತಿಯೊಬ್ಬ ಆಸ್ತಿಕನು ಜಗದ್ಗುರು ಶ್ರೀ ಶಂಕರಭಗವತ್ಪಾದಾಚಾರ್ಯರು ತಮ್ಮ ಭಾಷ್ಯಾದಿ ಗ್ರಂಥಗಳಲ್ಲಿ ಅನುಗ್ರಹಿಸಿದ ಉಪದೇಶಗಳನ್ನು

WWW.SRINGERI.NET

ಪ್ರತಿನಿತ್ಯ ಓದಿ ತನ್ನ ಜೀವನವನ್ನು ಸಾರ್ಥಕಪಡಿಸಿಕೊಳ್ಳಬೇಕು ಎಂಬ ಉದ್ದೇಶದಿಂದ ಶೃಂಗೇರಿ ಜಗದ್ಗುರು ಶ್ರೀ ಸನ್ನಿಧಾನಂಗಳವರು ಭಗವತ್ಪಾದರ ಉಪದೇಶಗಳನ್ನು ಆಯ್ಕೆಮಾಡಿ ಕರುಣಿಸಿದ್ದಾರೆ. ಇದನ್ನು ವಿದ್ವಾನ್ ಉಮಾಕಾಂತ ಭಟ್ಟ ಕೆರೆಕೈ ಅವರು ಕನ್ನಡ ಭಾಷೆಯಲ್ಲಿ ಹೆಚ್ಚು ಪ್ರಾಸಗಳನ್ನು ಬಳಸಿ ರಚಿಸಿದ್ದಾರೆ.)



WWW.SRINGERI.NET